ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೬೮
ವಿಚಾರ ಸಾಹಿತ್ಯಮಾಲೆ – ೮೧
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಜೀವನದ ಹರಿವಿನಿಂದ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**

(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**

(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ಜೀವನದ ಹರಿವಿನಿಂದ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ

(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)

–ಋಗ್ವೇದ, I ೮೯–೧


ಮೂಲ

**ನಟ್‌ವರ್ ಸಿಂಹಜಿ**

ಅನುವಾದ

**ಚಿರಂಜೀವಿ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು

ಮತ್ತು

**ಭಾರತೀಯ ವಿದ್ಯಾ ಭವನ,** ಮೈಸೂರು

**Jeevanada Harivininda:** Kannada translation of *From the Flow of Life* : **Natvar Sinhaji;** Kannada translation by **Chiranjeevi;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 52. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxii + ೫೨
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೬೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

# ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**‘ಕನಕದಾಸರ ಕೃತಿ’**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11
(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆರ್ಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

'ಜೀವನದ ಹರಿವಿನಿಂದ' ಎಂಬ ಪುಸ್ತಕ ನಟವರಸಿಂಹ ಜೀ ಅವರ *From the Flow of Life* ಎಂಬ ಪುಸ್ತಕದ ಕನ್ನಡ ಅನುವಾದ. ಶ್ರೀ ಚಿರಂಜೀವಿ ಅವರು ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟ ವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಪೀಠಿಕೆ

ಮೇಲ್ನೋಟಕ್ಕೆ ಕಾಣುವ ವಿಷಯಗಳಿಗಿಂತ ಜೀವನದ ಆಂತರಿಕ ವಿಷಯಗಳ ಕಡೆಗೆ ನನ್ನ ಆಸಕ್ತಿ ಬಹಳ ಕಾಲದವರೆಗೆ ಹರಡಿತ್ತು. ಈ ಹೊಸ ದೃಷ್ಟಿಯಿಂದ ದಿನನಿತ್ಯದ ವಿಷಯಗಳನ್ನು ಕುರಿತು ಬರೆಯಲು ಆರಂಭಿಸಿದ ಮೇಲೆ ಜೀವನಕ್ಕೆ ಒಂದು ಹೊಸ ಅರ್ಥವಿರುವುದು ನನ್ನ ಗಮನಕ್ಕೆ ಬಂದಿತು. ಇದನ್ನು ನಾನು ಬರೆಯಲು ಆರಂಭಿಸಿದೆ. ಇದರಿಂದ ಹೊಸ ಪ್ರದೇಶವನ್ನು ಅನ್ವೇಷಣೆ ಮಾಡುತ್ತಿರುವ ಸಂತೋಷವಾಯಿತು. ನಾನು ಏನೋ ಹೊಸದನ್ನು ಹುಡುಕುತ್ತಿರುವಂತೆ ಭಾಸವಾಗುತ್ತಿತ್ತು. ಅಲ್ಲೊಂದು ಇಲ್ಲೊಂದು ಆಡಿದ ಮಾತುಗಳು (ಕೆಲವು ನನ್ನ ಪತ್ನಿ ಸೂಚಿಸಿದಳು) ಬಹಳ ಗಂಭೀರವಾದ ಚರ್ಚೆಗೆ ದಾರಿಮಾಡಿಕೊಟ್ಟವು. ಈಗ ಅವುಗಳನ್ನು ಗಮನಿಸಿದರೆ , ಅವು ಸಂಪೂರ್ಣವಾಗಿ ಆಡುಮಾತುಗಳಿಗಿಂತ ಭಿನ್ನವಾದ ಜಗತ್ತನ್ನೇ ಸೃಷ್ಟಿಸಿದಂತೆ ತೋರುತ್ತಿದೆ. 'ಹುಡುಕು, ನಿನಗೆ ಅದು ದೊರಕುತ್ತದೆ' ಎಂಬ ಪ್ರಾಚೀನ ಉಕ್ತಿಯ ಅರ್ಥವನ್ನು ಮೊದಲಿಗಿಂತ ಹೆಚ್ಚಿಗೆ ಈಗ ನಾನು ಅರಿಯತೊಡಗಿದ್ದೇನೆ.

ಜೀವನವು ಹರಿಯುವ ಒಂದು ಹೊಳೆಯಂತೆ; ಆ ಹೊಳೆಯು ಒಬ್ಬನಿಗೆ ಸಂಬಂಧಿಸಿದ್ದಿರಬಹುದು ಅಥವಾ ಹತ್ತಾರು ಜನಗಳ ಜೀವನಕ್ಕೆ ಸಂಬಂಧಿಸಿದ್ದಿರಬಹುದು. ಮಳೆಯ ಪ್ರತ್ಯೇಕ ಹನಿಗಳು ಒಂದುಗೂಡಿ ಎಣಿಸಲಾರದಷ್ಟು ಕಲ್ಲು ಗುಂಡುಗಳ ಮೇಲೆ ಹರಿಯುತ್ತಿರುವುದನ್ನು ಇದು ನೆನಪಿಸುತ್ತದೆ. ನಾನೂ ಕೂಡ ನೂರಾರು ಕಲ್ಲು ಗುಂಡುಗಳ ಮೇಲೆ ನನ್ನ ಗಮನವನ್ನು ಹರಿಸಿ, ಅವುಗಳಲ್ಲಿ ಕೆಲವನ್ನು ಮಾತ್ರ ನಾನು ಆರಿಸಿಕೊಂಡು, ಅವುಗಳನ್ನು ಅಕಾರಾದಿ ಕ್ರಮದಲ್ಲಿ, ಅವುಗಳಿಗೆ ಒಪ್ಪಬಹುದು ಅಥವಾ ಒಪ್ಪದಿರಬಹುದು; ಆದರೆ ಅವು ಓದುಗರಿಗೆ ಪುರುಸೊತ್ತಿನ ಸಮಯದಲ್ಲಿ ಸ್ವಲ್ಪ ಒಳ್ಳೆಯ ಕಾಲಕ್ಷೇಪವನ್ನು ಒದಗಿಸಬಲ್ಲರು ಎಂದು ನಾನು ಭಾವಿಸಿದ್ದೇನೆ.

ಫಿರ್‌ಗ್ರೋವ್ **ನಟ್‌ವರ್ ಸಿಂಹಜಿ**
ಉದಕಮಂಡಲ
ಜುಲೈ ೧೦, ೧೯೬೨

Blank



## ಪರಿವಿಡಿ


| | |
|---|---|
| ಮುನ್ನುಡಿ | v |
| ಸಂದೇಶ | vii |
| ಹಾರೈಕೆ | viii |
| ಪ್ರಾಸ್ತಾವಿಕ ನುಡಿ | ix |
| ಪೀಠಿಕೆ | xi |
| ಅರಿಕೆ | xiv |
| ಕುಲಪತಿಗಳ ಪ್ರಸ್ತಾವನೆ | xv |
| ಪೀಠಿಕೆ | xvii |
| ಪದಗಳ ವಿವರಣೆ (ಅತಿರೇಕದಿಂದ ಸೊನ್ನೆಯವರೆಗೆ) | ೧–೫೧ |

Blank



# ಜೀವನದ ಹರಿವಿನಿಂದ

## ಪದಗಳ ವಿವರಣೆ

(ಅತಿರೇಕದಿಂದ ಸೊನ್ನೆಯವರೆಗೆ)

**ಅತಿರೇಕ**

ಸಹಜತೆಯ ಎಲ್ಲೆಯನ್ನು ಮೀರಿದಾಗ ಅಸಹಜತೆ ಉದ್ಭವವಾಗುತ್ತದೆ. ಮಿತಿರೇಖೆ ದಾಟಿದಾಗ ಅತಿರೇಕಕ್ಕೆ ಕಾಲಿಡುತ್ತೇವೆ. ಹೀಗಾಗಿ ಸಹಜ ಎನ್ನಿಸುವಂಥ ಕೃತ್ಯಗಳು ಕ್ರಮೇಣ ಅಸಹಜವಾಗುತ್ತವೆ:

ಉದಾರತೆ ಅಬ್ಬರದ ತೋರಿಕೆಯಾಗುತ್ತದೆ.<br>
ಸ್ಪರ್ಧೆ ಮತ್ಸರವಾಗುತ್ತದೆ.<br>
ತಿರಸ್ಕಾರ ಹಗೆತನವಾಗಿ ಮಾರ್ಪಡುತ್ತದೆ.<br>
ಭಕ್ಷಣೆ ಬಕಾಸುರತನವಾಗುತ್ತದೆ.<br>
ಕುಡಿಯುವುದು ಕುಡಿತದ ಚಟವಾಗುತ್ತದೆ.

**ಸಿಂಧೂರ ವೃಕ್ಷ**

ದೊಡ್ಡವರೆನಿಸಿಕೊಳ್ಳುವುದು ಕಷ್ಟ. ಆದರೆ ದೊಡ್ಡವರಾಗಿಯೂ ವಿನಯರಾಗಿರುವುದು ಮತ್ತೂ ಕಷ್ಟ. ಸಿಂಧೂರ ವೃಕ್ಷ ತನ್ನ ದೈತ್ಯಗಾತ್ರ ತಲುಪಲು ಮೊದಲಿಗೆ ಮೃದು ಸಿಂಧೂರ ಹಣ್ಣಾಗಿರುತ್ತದೆ ಎಂಬುದನ್ನು ಮರೆಯಬಾರದು. ವಿನಮ್ರತೆ ವಿಶಾಲತೆಗೆ ಎಡೆ ಮಾಡುತ್ತದೆ.

**ಅನುಸರಣೆ**

ತಾನು ಸುತ್ತುವುದರಿಂದ ಭೂಮಿ ಸೃಷ್ಟಿಸುವ ಬದಲಾವಣೆಗೆ ಹೇಗೆ ಹೊಂದಿಕೊಳ್ಳುತ್ತೇವೋ ಸಮಾಜದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಗೆ ಹೊಂದಿಕೊಳ್ಳುವುದು ಅನಿವಾರ್ಯ. ಸೃಷ್ಟಿಯ ಕಾಲಚಕ್ರದಲ್ಲಿ ನಮ್ಮದು ಸಣ್ಣ ಪಾತ್ರ ಎಂದು ಅರಿತಷ್ಟೂ ಸುತ್ತಲಿನವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಸುಲಭ.

**ಸೌಕರ್ಯ**

ನಾವು ಹೊಂದಿರುವ ಸೌಲಭ್ಯಗಳೂ ನಮ್ಮನ್ನು ಸೋಮಾರಿಗಳನ್ನಾಗಿಸದಂತೆ ನೋಡಿಕೊಳ್ಳಬೇಕು. ನಾಜೂಕಾದ ರಸ್ತೆ ಚಾಲಕನಿಗೆ ನಿದ್ರೆ ತರಿಸಬಾರದು.

**ಲಂಗರು ಮತ್ತು ಚುಕ್ಕಾಣಿ**

ಸಮಾಜಕ್ಕೆ ಒಳಿತಾಗುವುದನ್ನೇ ಮಾಡುವಂತೆ ನಮ್ಮ ಚುಕ್ಕಾಣಿಯನ್ನು ಚುರುಕಾಗಿಟ್ಟುಕೊಳ್ಳುವುದರ ಜತೆಗೆ ಕೆಡುಕಾಗುವಂತಹ ಕೆಲಸಗಳಿಗೆ ಮುನ್ನುಗ್ಗದಂತೆ ನಮ್ಮ ನಂಗಲ್ಲನ್ನು (ಲಂಗರು) ಭದ್ರ ಮಾಡಿಕೊಂಡಿರಬೇಕು. ಧರ್ಮ ಕೆಟ್ಟದ್ದಕ್ಕೆ ಮುನ್ನುಗ್ಗದಂತೆ ಲಂಗರು ಹಾಕಿ ನಿಲ್ಲಿಸುವುದಷ್ಟೇ ಅಲ್ಲದೆ, ಒಳ್ಳೆಯ ದಾರಿಗೆ ಒಯ್ಯುತ್ತದೆ.

**ತೋರಿಕೆಗಳು**

ಹೊರಗಡೆ ಕಾಣಿಸಿದಂತೆ ಒಳಗಿಲ್ಲದಿದ್ದರೆ ನಾವು ಅಧೋಗತಿಯ ದಾರಿ ಹಿಡಿದಿದ್ದೇವೆಂದೇ ಅರ್ಥ. ಆತ್ಮ ಪರಿಶುದ್ಧತೆಗೆ ಶ್ರಮಿಸುವುದು ಅತ್ಯಗತ್ಯ.

**ಆಸೆಗಳು**

ಆಸೆಗಳಿರುವುದು ಸಹಜ. ಆದರೆ ತಂದೆಯೂ ಒಬ್ಬ ಮಗನಾಗಿದ್ದ ತಾಯಿಯೂ ಸಹ ಮಗಳಾಗಿದ್ದಳು ಎಂಬುದನ್ನು ಹಲವು ಬಾರಿ ಮರೆಯುತ್ತೇವೆ.

**ಜೀರ್ಣಶಕ್ತಿ**

ಸುಮ್ಮನೆ ಮಾಹಿತಿ ಕಲೆಹಾಕುವುದರಿಂದ ಯಾವುದೇ ಪ್ರಯೋಜನವಿಲ್ಲ. ಅದನ್ನು ಅರಿತುಕೊಂಡು ಜ್ಞಾನಜ್ಯೋತಿಯನ್ನು ಬೆಳಗಿಸಿದರೆ ಅದರ ಉಪಯೋಗ. ತಿಂದದ್ದು ಮೈಗೆ ಹತ್ತಿದರೆ ಮಾತ್ರ ಉಪಯೋಗ ಉಳಿದೆಲ್ಲವೂ ವ್ಯರ್ಥ.

**ಜ್ಯೋತಿಷ್ಯ**

ಜ್ಯೋತಿಷ್ಯಕ್ಕೆ ಮಾರುಹೋದವನಿಗೆ ದೇವರ ಅನಂತ ದಯಾಪರತೆಯನ್ನು ತಿಳಿಹೇಳುವುದು ಕಷ್ಟ. ಹಸ್ತರೇಖೆ ಬಿಡಿ, ಇಡೀ ಕೈ ಇಲ್ಲದವನಿಗೆ ಭವಿಷ್ಯವಿದೆ ಎಂಬುದನ್ನು ನಾವು ಗಮನಿಸುವುದಿಲ್ಲ.



**ವ್ಯಾಮೋಹ**

ಮಳೆಗೆ ತೊಯ್ದ ಭೂಮಿ ತನ್ನೊಳಗೆ ನೀರು ಹರಿದುಹೋಗಲು ದಾರಿ ಮಾಡಿಕೊಟ್ಟು ಕೊನೆಗೆ ಕುಸಿದು ಬೀಳುತ್ತದೆ. ವ್ಯಾಮೋಹಕ್ಕೆ ತೊಯ್ದು ತನ್ನೊಳಗೆ ಅದು ಹರಿಯಲು ಅನುವು ಮಾಡಿಕೊಟ್ಟರೆ ನಾವೂ ಕುಸಿಯುವುದು ಖಂಡಿತ.

**ಉಪಾಧಿ ಹೊರಿಸುವುದು ಮತ್ತು ವಿತರಿಸುವುದು**

ಉಪಾಧಿಸುವುದು ಒಂದು ರೀತಿಯಲ್ಲಿ ವಿತರಣೆಯಿದ್ದಂತೆ. ನಮ್ಮಲ್ಲಿ ಏನಾದರೂ ಇದ್ದರೆ ಮಾತ್ರ ವಿತರಿಸಲು ಸಾಧ್ಯ ಹಾಗೂ ನಮ್ಮಲ್ಲಿರುವುದನ್ನು ಮಾತ್ರ ಕೊಡಲು ಸಾಧ್ಯ.

**ಪಾವಿತ್ರತೆ**

ಬರೀ ಆಚರಣೆ ಮತ್ತು ತೋರಿಕೆಗಳಿಂದ ಅಪವಿತ್ರತೆಯನ್ನು ತೊಡೆದು ಹಾಕಲು ಸಾಧ್ಯವಾಗಿದ್ದರೆ ಅಪವಿತ್ರತೆ ಎಂಬುದೇ ಇರುತ್ತಿರಲಿಲ್ಲ.

**ಅಧಿಕಾರ**

ಎಲ್ಲ ಅಧಿಕಾರಿಗಳೂ ಸಹ ಜನರು ತಮಗೆ ವಹಿಸಿರುವುದಷ್ಟೇ ಎಂದು ಅರಿತರೆ ಯಾವ ಅಧಿಕಾರಿಯೂ ತನ್ನ ದಕ್ಷತೆಯನ್ನು ಕಳೆದುಕೊಳ್ಳುವುದಿಲ್ಲ.

**ಅಧಿಕಾರ ಮತ್ತು ಆಸ್ತಿ**

ಸ್ವಾರ್ಥದಿಂದ ಮತ್ತು ಸ್ವಹಿತಕ್ಕಾಗಿ ಮಾಡಿಕೊಂಡ ಆಸ್ತಿ ಕಳೆದುಕೊಂಡರೆ ಮಾತ್ರ ದುಃಖವಾಗುತ್ತದೆ. ಪರಹಿತಕ್ಕಾಗಿ ಬದುಕಿ ಸಮಾಜದ ಒಳಿತಿಗೆಂದೇ ಸಂಪಾದನೆ ಮಾಡಿದವನಿಗೆ ಅದು ಹೋದರೂ ನಷ್ಟ ಎನಿಸುವುದಿಲ್ಲ. ಬರೀ ಆಸ್ತಿಯಲ್ಲ, ಅಧಿಕಾರ ಹೋದರೂ ಸಹ ಆತ ದುಃಖಿಸುವುದಿಲ್ಲ.

**ಜ್ಞಾನೋದಯ**

ಪಡೆದುಕೊಳ್ಳಲು ಅರ್ಹರಾದವರು ಜ್ಞಾನೋದಯ. ಕೊಡಲು ಅರ್ಹರಾದವರು ಅದನ್ನು ಪಡೆಯಲು ಶ್ರಮಿಸಬೇಕು.

**ಹಿಂದೆ ಮತ್ತು ಮುಂದೆ**

ಕೆಲವು ಸೋಲುಗಳು ನಾವು ಹಿಮ್ಮುಖವಾಗಿ ನಡೆದಿದ್ದೇವೇನೋ ಎಂಬ ಸಂಶಯ ಹುಟ್ಟಿಸುತ್ತವೆ. ಆದರೆ ಕಾಲಾನುಕ್ರಮದಲ್ಲಿ ತಿಳಿಯುತ್ತದೆ. ಹಿಂದೆ ಬಿದ್ದಿದ್ದೇವೆ

ಎಂದು ಹೆದರಿಸಿದ ಆ ಸೋಲುಗಳೇ ನಮ್ಮನ್ನು ಮುಂದಕ್ಕೊಯ್ದಿರುತ್ತದೆ ಎಂದು. ತಿರುಗುತ್ತಿರುವ ಸೈಕಲ್ ಚಕ್ರದ ಕೆಳಾರ್ಧ ಭಾಗ ಹಿಮ್ಮುಖ ಚಲನೆಯಲ್ಲಿದೆ ಎನಿಸುತ್ತದೆ. ಅಷ್ಟೇ ಏಕೆ, ಯಾರಾದರೂ ನಡೆದು ಹೋಗುವುದನ್ನು ನೋಡಿ. ನಡೆಯುವ ಕ್ರಮದಲ್ಲಿ ಕಾಲು ಹಿಂದೆ ಹೆಜ್ಜೆ ಹಾಕುತ್ತಿದೆಯೇನೋ ಎನಿಸುವುದು. ಆದರೆ ನಿಜದಲ್ಲಿ ಚಕ್ರ ಹಾಗೂ ಕಾಲು ಎರಡೂ ತಮ್ಮ ತಮ್ಮ ದೇಹಗಳನ್ನು ಮುಂದಕ್ಕೆ ತಳ್ಳುತ್ತಿರುತ್ತವೆ.

**...ಬಂಗಾರಕ್ಕಿಂತ ಬೆಳ್ಳಿ ಮೇಲು**

ನಾವು ಪರರ ಕುರಿತು ಕೆಡುಕಾಗಿ ಯೋಚಿಸದಿರಲಿ ಎಂಬುದು ಪರರು ನಮ್ಮ ಕುರಿತು ಹಾಗೆ ಮಾಡದಿರಲಿ ಎಂಬುದಕ್ಕಿಂತ ಮೇಲು.

ಪ್ರೀತಿಯಿಂದ ಹೊರಬಿದ್ದ ಹಕ್ಕಿ ಬಂಗಾರದ ಪಂಜರದಲ್ಲಿರುವ ಹಕ್ಕಿಗಿಂತ ಹೆಚ್ಚು ಸುಖಿ.

ಪರರು ನಮ್ಮನ್ನು ಅಲ್ಪ ಎಂದು ನಿಂದಿಸಿದಾಗ ನಾವು ಅಲ್ಪರು ಎಂಬ ಅರಿವು ನಮಗಿರುವುದು ಎಷ್ಟೋ ಒಳಿತು. ಇದನ್ನು ಅರಿತೂ ದೊಡ್ಡವ್ಯಕ್ತಿ ಎನಿಸಿಕೊಳ್ಳುವುದು ದೊಡ್ಡ ನರಕ.

**ದೊಡ್ಡದು ಮತ್ತು ಸಣ್ಣದು**

ದೊಡ್ಡ ಮತ್ತು ಸಣ್ಣ ಎಂಬುವು ವಿರುದ್ಧ ಪದಗಳಲ್ಲ. ಚಿಕ್ಕ ನಾಣ್ಯಗಳ ಓಡಾಟದಿಂದಾಗಿಯೇ ದೊಡ್ಡ ನೋಟುಗಳು ಚಲಾವಣೆಯಲ್ಲಿರುವುದು.

**ದುರ್ಬೀನು**

ಎಷ್ಟೇ ದೂರ ದೃಷ್ಟಿಯಿದ್ದರೂ ಪ್ರಪಂಚವನ್ನು ಕಂಡಷ್ಟು ಸ್ಪಷ್ಟವಾಗಿ ನಮ್ಮನ್ನೇ ನಾವು ಕಾಣುವ ಶಕ್ತಿಯಿರಬೇಕು. ಇಲ್ಲದಿದ್ದರೆ ಪ್ರಪಂಚವನ್ನೆಲ್ಲ ನೋಡಲು ಶಕ್ತವಾಗಿದ್ದರೂ ತನ್ನನ್ನು ತಾನು ನೋಡಿಕೊಳ್ಳಲು ಸಾಧ್ಯವಾಗದ ದುರ್ಬೀನಿನಂತೆ ಆಗಿಬಿಡುತ್ತೇವೆ.

**ವರದಾನ**

ನಾವು ಹೊಂದಿರುವುದು ನಮಗೆ ಬೇಕಾಗಿರುವುದಕ್ಕಿಂತ ಹೆಚ್ಚು ಎಂದು ಅರಿತೊಡನೆ ನಮ್ಮದು ಎಂಬುದೆಲ್ಲ ವರದಾನವಾಗಿ ಕಾಣುತ್ತದೆ. ಸ್ವಲ್ಪ ಯೋಚಿಸಿ ನೋಡಿದರೆ ನಮ್ಮ ಯೋಗ್ಯತೆಗಿಂತ ಹೆಚ್ಚು ಹೊಂದಿದ್ದೇವೆ ಎಂಬುದು ತಿಳಿಯುತ್ತದೆ. ಬಾರನೆಂಬುದನ್ನು ಬಿಡು ಎಂದು ಡಿವಿಜಿ ಹೇಳಿದ್ದು ಅದಕ್ಕೇ.



**ಬಿರುಗಾಳಿ**

ಒಂದೇ ದಿಕ್ಕಿಗೆ ಬೀಸುವ ಬಿರುಗಾಳಿಯಿಂದ ಒಂದು ಕಡೆಗೆ ಬಾಗಿ ಬೆಳೆಯುವ ಮರದಂತೆ ವ್ಯಕ್ತಿಯೂ ಸಹ. ಒಂದು ರಾಜಕೀಯ ಅಥವಾ ಮತ ಸಿದ್ಧಾಂತಕ್ಕೆ ಸಂಪೂರ್ಣವಾಗಿ ಒಡ್ಡಿಕೊಂಡು ಬೆಳೆಯುವ ವ್ಯಕ್ತಿ ಸಹ ಒಂದು ಕಡೆಗೆ ಬಗ್ಗಿ ಅಸಹಜವಾಗಿ ಬೆಳೆಯುತ್ತಾನೆ.

**ಸಹೋದರತ್ವ**

ದೇವರಲ್ಲಿ ನಂಬಿಕೆಯಿಲ್ಲದಿದ್ದರೂ ಸಹೋದರತ್ವದಲ್ಲಿ ನಂಬಿಕೆ ಇಡುವವರಿಗೆ ಒಂದು ಪಾಠ. ಎಲ್ಲರೂ ನಮ್ಮ ಸಹೋದರರೇ, ಬಂಧು ಬಾಂಧವರೇ ಎಂದು ನಂಬುವವರು ಎಲ್ಲರಿಗೂ ಜನ್ಮಕೊಟ್ಟ ತಂದೆ–ತಾಯಿಯರಲ್ಲಿ ನಂಬಿಕೆಯಿಡಲೇಬೇಕು. ಅವರಿಲ್ಲದೇ ಸಹೋದರತ್ವ, ಬಂಧುತ್ವ ಇರಲು ಸಾಧ್ಯವಿಲ್ಲ. ಮೂಲ ತಂದೆತಾಯಿ ಪರಮೇಶ್ವರ–ಪಾರ್ವತಿಯಲ್ಲದೆ ಮತ್ಯಾರು? ವೈಷ್ಣವ ಜನತೋ ತೇನೇ ಕಹಿಯೇ ಎಂದು ಗಾಂಧೀಜಿ ಹೇಳಿದ್ದು ಅದಕ್ಕೆ

**ಸಮಯದ ಹೊರೆ**

ನಿವೃತ್ತಿ ಜೀವನ ಎಷ್ಟೋ ಜನರಿಗೆ ಹೊರೆ ಎನಿಸುತ್ತದೆ. ಅಗಾಧವಾಗಿ ಲಭ್ಯವಿರುವ ಸಮಯ ಹೊರೆಯಾಗಿ ಕಾಣತೊಡಗುತ್ತದೆ. ಯೌವ್ವನದಲ್ಲಿ ಪರ್ಯಾಯ ವಿಷಯಗಳಲ್ಲಿ ಆಸಕ್ತಿ ಬೆಳೆಸಿಕೊಳ್ಳದಿದ್ದರೆ ಹೀಗಾಗುತ್ತದೆ. ಶಾಲೆಯಲ್ಲಿ ಕಲಿಯುವ ಶಿಕ್ಷಣದ ಹೊರತಾಗಿ ಸಂಗೀತ–ಸಾಹಿತ್ಯ ಮುಂತಾದ ಹವ್ಯಾಸಗಳನ್ನು ಬೆಳೆಸಿ ಕೊಳ್ಳದಿದ್ದರೆ ಸಮಯ ಜೀವನ ಕೊಟ್ಟ ಅತಿ ನಂಬುಗೆಯ ಗೆಳೆಯನಾಗಲು ಹೇಗೆ ಸಾಧ್ಯ.

**ದೀಪದ ಸೊಡರು**

ಹೇಗೆ ಬೆಳಗುವ ದೀಪದ ಸೊಡರನ್ನು ಮನುಷ್ಯ ಒಂದು ಸಲಕ್ಕೆ ಊದಿ ಆರಿಸಬಲ್ಲನೋ ತನ್ನ ಜೀವನವೂ ಸಹ ದೇವರು ಒಂದು ಕ್ಷಣಕ್ಕೆ ಆರಿಸಬಲ್ಲ ಎಂದು ತಿಳಿಯಬೇಕು.

**ಕ್ಯಾನ್ಸರ್ ಹುಣ್ಣು**

ಸಂಶಯ ಎನ್ನುವುದು ಕ್ಯಾನ್ಸರ್ ಇದ್ದಂತೆ. ಒಂದು ಸಲ ಬೆಳೆಯಲು ಅವಕಾಶ ಕೊಟ್ಟರೆ ಅದು ನಮ್ಮನ್ನು ತಿಂದು ಹರಡುತ್ತ ಹೋಗುತ್ತದೆ. ಕರೆಯದೆ ಬರುವ ಇಂಥ ಅತಿಥಿಗಳನ್ನು ಮೊದಲಿಗೇ ಹೊರಗಟ್ಟಿದರೆ ನಾವು ಕ್ಷೇಮ.

**ಸಾಮರ್ಥ್ಯ**

* ಶಕ್ತಿಗೆ ಎಂದೂ ಕೊರತೆಯಿಲ್ಲ. ಅದನ್ನು ಉಪಯೋಗಿಸುವ ಸಾಮರ್ಥ್ಯ ನಿಮಗಿರಬೇಕು. ವಿದ್ಯುಚ್ಛಕ್ತಿ ಇದ್ದರೆ ಸಾಲದು. ಅದನ್ನು ಪಡೆದು ಬೆಳಗುವುದು ದೀಪದ ಕೆಲಸ. ದೀಪದ ಸಾಮರ್ಥ್ಯದ ಮೇಲೆ ಹೆಚ್ಚು ಬೆಳಕೋ ಅಥವಾ ಮಬ್ಬು ಬೆಳಕೋ ನಿರ್ಧಾರವಾಗುತ್ತದೆ.
* ಒಂದು ಅಡಿ ಎಂದರೆ ೧೨ ಇಂಚು, ಒಂದು ಮೀಟರ್ ಎಂದರೆ ಮೂರು ಅಡಿಗಳು, ಒಂದು ಮೈಲಿ ಎಂದರೆ ಸುಮಾರು ಒಂದೂವರೆ ಕಿ.ಮೀ.ನಷ್ಟು... ಹೀಗೆ ಎಷ್ಟೋ ರೀತಿಯಲ್ಲಿ ಅಳತೆ ಮಾಡಬಹುದಾದರೂ ಅಳತೆ ಮಾಡುವ ವಸ್ತುವನ್ನು ಬದಲಿಸಲು ಸಾಧ್ಯವಿಲ್ಲ. ತಮ್ಮ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅಳೆಯುತ್ತಾರೆ. ಆದ್ದರಿಂದ ಎಲ್ಲವೂ ಸಹ ಅಭಿಪ್ರಾಯಗಳಲ್ಲಿ ಕಂಡುಬರುವ ವಿಭಿನ್ನತೆಗಳು.

**ಕಣ್ಣು ಪೊರೆ**

ಕಣ್ಣಿನಲ್ಲಿ ಬೆಳೆದ ಪೊರೆಯನ್ನು ತಜ್ಞ ತೆಗೆದುಹಾಕುತ್ತಾನೆ. ಆದರೆ ಮನಸ್ಸಿನ ಸುತ್ತ ಬೆಳೆದ ಪೊರೆಯನ್ನು ತೆಗೆದುಹಾಕಲು ನಮ್ಮಿಂದ ಮಾತ್ರ ಸಾಧ್ಯ. ನಮ್ಮ ಅಂತರಂಗವನ್ನು ನಾವೇ ಶುದ್ಧಿ ಮಾಡಿಕೊಳ್ಳಬೇಕು.

**ಬದಲಾವಣೆ**

ಬದಲಾವಣೆ ಸಹಜವಾದುದು. ಆದರೆ ಕೆಲವೊಮ್ಮೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ಕೆಲವೊಂದು ಬದಲಾವಣೆಗಳು ಗಲಭೆಗೆ ಕಾರಣವಾಗುತ್ತವೆ ಹೊರತು ಹೊಸತೇನನ್ನೂ ತರುವುದಿಲ್ಲ. ಇದಕ್ಕೆ ಕಾರಣ ಬದಲಾವಣೆಯಲ್ಲಿ ಯಾವುದೇ ಮಹತ್ವದ ಅಂಶಗಳಿರಲಿಲ್ಲ ಎಂದಲ್ಲ; ಬದಲಾವಣೆಗೆ ಪೂರಕವಾಗಿ ಸಮಾಜ ತಯಾರಿಯಾಗಿರಲಿಲ್ಲವೆಂದರೆ ಅದು ವ್ಯರ್ಥವಾಗುವುದು ಖಂಡಿತ. ಮತ್ತೊಂದು ದಿಕ್ಕಿನಿಂದ ನೋಡಿದಾಗ ಈ ವಿಷಯ ಮತ್ತೂ ಸ್ಪಷ್ಟವಾಗುತ್ತದೆ. ಬದಲಾವಣೆಯೊಂದು ಹೆಚ್ಚು ಕಾಲ ನಿಲ್ಲಲಿಲ್ಲವೆಂದರೆ ಅದಕ್ಕೆ ಕಾರಣ ಒಂದೋ ಜನರು ಆ ಬದಲಾವಣೆಗೆ ಹೊಂದಿಕೊಳ್ಳಲು ತಯಾರಾಗಿರಲಿಲ್ಲ ಅಥವಾ ತಯಾರಾಗಿದ್ದೇವೆ ಎಂಬ ಭ್ರಮೆಯಲ್ಲಿದ್ದರು ಎಂದು. ಅಂಥ ಸಂದರ್ಭದಲ್ಲಿ ಜನರೇ ಬದಲಾವಣೆಯನ್ನು ಇಷ್ಟಪಟ್ಟರೂ ಅದಕ್ಕೆ ಒಗ್ಗಿಕೊಳ್ಳಲಾಗದೇ ಸೋಲುತ್ತಾರೆ.



**ಔದಾರ್ಯತೆ**

ನಿಷ್ಕಾಮ ಕರ್ಮ ಎಂಬ ಭಗವದ್ಗೀತೆಯ ವಾಕ್ಯ ಗಾಢವಾದುದು. ಯಾವುದೇ ಪ್ರತಿಫಲ ನಿರೀಕ್ಷೆಯಿಲ್ಲದೆ ಸಹಾಯ ಮಾಡುವುದು ಅಷ್ಟು ಸುಲಭವಲ್ಲ. ಔದಾರ್ಯಕ್ಕೆಂದು ಏರ್ಪಡಿಸಿದ ಔತಣದಲ್ಲಿ ನಾವೇ ಊಟ ಮಾಡುವುದು ನಿಷ್ಕಾಮ ಕರ್ಮವಾಗುವುದಿಲ್ಲ. ಹಾಗೆ ಊಟ ಮಾಡುವುದರ ಬದಲು ಹಸಿದು ಹೊರ ನಿಂತಿರುವ ಮತ್ತೊಬ್ಬನಿಗೆ ನಮ್ಮ ಅನ್ನವನ್ನು ಅರ್ಪಿಸಿ ಆತನ ಹಸಿವನ್ನು ನಾವು ಅನುಭವಿಸಿದಾಗ ಮಾತ್ರ ಔದಾರ್ಯತೆ ಎಂಬ ಪದಕ್ಕೆ ಮೌಲ್ಯ ತರಲು ಸಾಧ್ಯ.

**ಮಗು**

ಆಟಿಕೆಗಳಿಗೆ ಮಾರುಹೋಗಿ ಆಟದಲ್ಲಿ ಮುಳುಗಿದ ಮಗುವಿಗೆ ತನ್ನ ತಾಯಿ ತಂದೆಯ ಬಗೆಗಿನ ಗಮನ ಹೇಗಿರುವುದಿಲ್ಲವೋ ಪ್ರಾಪಂಚಿಕ ಐಭೋಗಗಳಲ್ಲಿ ಮುಳುಗಿದ ಮನುಷ್ಯನಿಗೂ ಸಹ ತನ್ನ ಸೃಷ್ಟಿಕರ್ತನ ಕುರಿತು ಗಮನ ಇರುವುದಿಲ್ಲ.

**ಸೌಜನ್ಯ**

ಸೌಜನ್ಯ ಮನುಷ್ಯನಲ್ಲಿ ಕಡಿಮೆಯಾದರಂತೂ ಅದನ್ನು ಬೇರೊಂದು ರೀತಿಯಲ್ಲಿ ಅನುಷ್ಠಾನಕ್ಕೆ ತರಲು ಹೆಚ್ಚು ಹೆಚ್ಚು ಕಾನೂನುಗಳು ಹೆಚ್ಚಾಗುತ್ತಾ ಹೋಗುತ್ತವೆ.

**ನಾಗರಿಕತೆ**

ವಿದ್ಯೆ, ಬುದ್ಧಿ ಮುಂತಾದ ವಿಷಯಗಳು ಮೆದುಳಿಗೆ ತಿಳಿದರೆ, ನಾಗರಿಕತೆ ಎಂಬುದು ಹೃದಯಕ್ಕೆ ತಿಳಿಯುವಂಥದ್ದು. ಕೆಲವರು ಅಕ್ಷರಸ್ಥರಾಗಿದ್ದರೂ ಬುದ್ಧಿವಂತರಾಗಿರುವುದಿಲ್ಲ. ಶಿಕ್ಷಣ ದೊರೆತರೂ ಕೂಡ ನಾಗರಿಕರಾಗಿರುವುದಿಲ್ಲ. ಸುಸಂಸ್ಕೃತತೆ ಹೃದಯದಿಂದ ಉದಿಸಿ ಬರಬೇಕು.

**ವಾತಾವರಣ**

ಎಲ್ಲಿಯವರೆಗೆ ನಮ್ಮ ಮನಸ್ಸಿನ ವಾತಾವರಣ ನೆಮ್ಮದಿಯಿಂದ ಕೂಡಿರುತ್ತದೋ ಅಲ್ಲಿಯವರೆಗೆ ಶಾಂತಿಗೋಸ್ಕರ ಅಲೆದಾಟ ಬೇಕಿಲ್ಲ. ಮನಃಶಾಂತಿ ಇದ್ದವನು ಬದಲಾವಣೆ ಬಯಸಿ ಅರಸುತ್ತಾ ಹೋಗುವುದಿಲ್ಲ.

**ಬಟ್ಟೆ**

ಹತ್ತಿ ಹೇಗೆ ಹತ್ತಾರು ಕೈಗಳು ಶ್ರಮಿಸಿ, ನೂರಾರು ಗತಿಗಳಲ್ಲಿ ಸಾಗಿದ ನಂತರ ಅರಿವೆಯಾಗುತ್ತದೋ ಶಿಷ್ಯನೊಬ್ಬ ಕೂಡ ಹತ್ತಾರು ಗುರುಗಳ ಕೈಗಳಲ್ಲಿ ಪಳಗಿದ ನಂತರವೇ ಅರಿವನ್ನು ಪಡೆಯಲು ಸಾಧ್ಯ.

**ಮೋಡ**

ಎಲ್ಲ ಮೋಡಗಳೂ ಮಳೆ ಸುರಿಸುವುದಿಲ್ಲ. ಎಲ್ಲ ಮಿಂಚುಗಳೂ ಸಿಡಿಲಲ್ಲ. ಹಾಗೇ ಎಲ್ಲ ಜಿಪುಣರೂ ಶ್ರೀಮಂತರಾಗುವುದಿಲ್ಲ. ಎಲ್ಲ ಶ್ರೀಮಂತರೂ ದಾನಿಗಳಾಗಲು ಸಾಧ್ಯವಿಲ್ಲ.

**ನಾಗರಹಾವು ಮತ್ತು ಚೇಳು**

ನಾಗರಹಾವಿನ ಹೆಡೆಯ ಹೊಡೆತಕ್ಕೆ ಸಾಯುವುದು ಚೇಳಿನ ಮುಳ್ಳಿನೇಟಿನಿಂದ ಸಾಯುವುದಕ್ಕಿಂತ ಮೇಲು. ಬೆನ್ನಿಗೆ ಚೂರಿ ಹಾಕಿಸಿಕೊಳ್ಳುವುದಕ್ಕಿಂತ ಸಾವಿನ ಕಣ್ಣಲ್ಲಿ ಕಣ್ಣಿಟ್ಟು ನೋಡಿ ಪ್ರಾಣ ಬಿಡುವುದು ಒಳಿತು.

**ಸ್ಪರ್ಧೆ**

ಸ್ಪರ್ಧೆಯಂಗಳ ಸಣ್ಣದಾದಷ್ಟೂ ಪೈಪೋಟಿ ಜೋರಾಗಿರುತ್ತದೆ.

**ತತ್ವ**

ತತ್ವದಲ್ಲಿ ನಶಿಸುವುದು ಎಲ್ಲೂ ಜೀವಿಸಲು ಸಾಧ್ಯವಿಲ್ಲ;
ತತ್ವದಲ್ಲಿ ಉಳಿಯುವುದು ನಶಿಸುವುದು ಸಾಧ್ಯವಿಲ್ಲ.
ತತ್ವವೊಂದೇ ಚಿರಸ್ಥಾಯಿಯಾಗಿ ಉಳಿಯುವ ಚಿರಂಜೀವಿ.

**ಸಮಾಧಾನ**

ಹಣೆಬರದ ಮೇಲೆ ಕುರುಡು ನಂಬಿಕೆಯಿಟ್ಟು ಎಲ್ಲವೂ ವಿಧಿಯಾಟ ಎಂದು ಕೈತೊಳೆದುಕೊಳ್ಳುವುದು ನಮಗೆ ನಾವು ಮಾಡಿಕೊಳ್ಳುವ ಮೋಸ. ವಿಧಿಯೆಂಬ ತುಂಡು ಬಟ್ಟೆಯನ್ನು ಕಣ್ಣಿಗೆ ಕಟ್ಟಿಕೊಳ್ಳು. ಅದು ನಮಗೆ ಕೊಟ್ಟ ಉಡುಗೊರೆಯಲ್ಲ.



**ಸಂವಿಧಾನ**

ಒಂದು ದೇಶದ, ರಾಜ್ಯದ ಅಥವಾ ಸಂಸ್ಥೆಯ ಸಂವಿಧಾನ ಆರೋಗ್ಯವಂತ ದೇಹದಂತಿರಬೇಕು. ಕೋಟಿ ಜೀವಕೋಶಗಳು ಹುಟ್ಟಿ ಬಾಳಿ ಸತ್ತರೂ ದೇಹ ಮಾತ್ರ ಆರೋಗ್ಯವಂತವಾಗಿರುತ್ತದೆ.

**ಅನುಕೂಲತೆ**

ನಮ್ಮ ನಿರೀಕ್ಷೆಗೆ ಅನುಗುಣವಾಗಿ ಜರುಗುವುದನ್ನೆಲ್ಲ ಒಪ್ಪಿಕೊಳ್ಳುತ್ತೇವೆ. ನಮ್ಮ ಮನಃಸ್ಥಿತಿಯಲ್ಲಿ ಸ್ವಲ್ಪ ವ್ಯತ್ಯಾಸವಿದ್ದಾಗ ಅದೇ ವಿಷಯ ಎದುರಾದರೆ ಅದನ್ನು ವಿರೋಧಿಸುತ್ತೇವೆ ಅಥವಾ ಪಲಾಯನಗೈಯುತ್ತೇವೆ.

ನಮ್ಮ ಮನೋಭಾವ, ನಿರೀಕ್ಷೆ, ಅನುಕೂಲತೆ ಮತ್ತು ಆಶಾಭಂಗ– ಇವೆಲ್ಲವನ್ನು ನಾವು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳುತ್ತಾ ಬಂದಿದ್ದೇವೆಂದರೆ ನಮ್ಮ ಜೀವನಪೂರ್ತಿ ಅನುಕೂಲದ ಆಳಾಗಿದ್ದರೂ ನಮಗೆ ತಿಳಿಯುವುದಿಲ್ಲ. ಅನುಕೂಲ ಪಿಶಾಚಿಗಳಿಗೆ ಅರಿವು ಬರುವುದೆಂತು?

**ದೃಢನಿರ್ಧಾರ ಮತ್ತು ಅನುಕೂಲತೆ**

ಕ್ಷಣ ಕ್ಷಣವೂ ನಮ್ಮನ್ನು ನಾವೇ ಪರೀಕ್ಷಿಸುತ್ತಿರಬೇಕು; ನಮ್ಮ ದೃಢನಿರ್ಧಾರದ ಪ್ರಕಾರವೇ ನಡೆಯುತ್ತಿದ್ದೇವೆ ಎಂದುಕೊಳ್ಳುವ ಎಷ್ಟೋ ಬಾರಿ ನಮ್ಮ ಅನುಕೂಲಕ್ಕೆ ತಕ್ಕಂತೆ ನಡೆದಿರುವುದು ಕಾಣುತ್ತದೆ.

**ಭ್ರಷ್ಟತೆ**

ಭ್ರಷ್ಟತೆ ಶ್ರೇಷ್ಠತೆಗೂ ಕೆಲವು ಸಮಾನ ಅಂಶಗಳಿವೆ. ಶ್ರೇಷ್ಠತೆಯಂತೆ ಅದೂ ಸಹ ವಂಶಪಾರಂಪರ್ಯವಾಗಿ ಬರಬಹುದು ಅಥವಾ ನಾವೇ ಅದನ್ನು ಗಳಿಸಬಹುದು ಅಥವಾ ಬೇರೆಯವರ ಒತ್ತಾಯಕ್ಕೆ ಮಣಿದು ಭ್ರಷ್ಟರಾಗಬಹುದು.

**ಶೌರ್ಯ**

* ನಮ್ಮ ಒಳ್ಳೆತನಗಳನ್ನು ಹೇಳಿಕೊಳ್ಳಲು ಬೇಕಾಗುವ ಧೈರ್ಯಕ್ಕಿಂತ ನಮ್ಮ ಕೊಳಕನ್ನು ತೋರಿಸಲು ಹೆಚ್ಚು ಧೈರ್ಯಬೇಕು. ಆದರೆ ತೃಣಮಾತ್ರವೂ ದುಷ್ಟತನವಿಲ್ಲದೆ ಇರುವವನಿಗೆ ತನ್ನ ಒಳ್ಳೆತನಗಳನ್ನು ಹೇಳಿಕೊಳ್ಳಲು ಅತಿ ಹೆಚ್ಚಿನ ಧೈರ್ಯ ಬೇಕು.
* ಶೌರ್ಯವಿಲ್ಲದೆ ಗೆಲುವು ಸಾಧ್ಯವಿಲ್ಲ. ಎದೆಗುಂದದೆ ಮುನ್ನುಗ್ಗುವುದೇ ಗೆಲುವು ಬೇಡುವ ಅತಿ ದೊಡ್ಡ ಫೀಜು. ಹಾಗಾಗಿ ಅಭಿವೃದ್ಧಿಯ ಬಾಗಿಲಿನ

ಬೀಗಕ್ಕೆ ಧೈರ್ಯವೇ ಕೀಲಿ. ಶೌರ್ಯವಿಲ್ಲದೆ ಯಾವ ನಾಯಕನೂ, ಮುತ್ಸದ್ದಿಯೂ ಅಥವಾ ಸುಧಾರಕನೂ ಕಾರ್ಯ ನಿರ್ವಹಿಸಲು ಸಾಧ್ಯವಿಲ್ಲ. ಇವರೆಲ್ಲರಿಲ್ಲದ ಪ್ರಪಂಚ ನಿಂತ ನೀರಿದ್ದಂತೆ. ಹರಿಯುವ ರಕ್ತ ನಿಂತರೆ ಸಾವೊಂದೇ ಕೊನೆಗೊಳ್ಳುವುದು.

* ಸತ್ಯ ಮತ್ತು ಶೀಲವಂತನಾಗಿರುವವನು ಎಂದೂ ಧೈರ್ಯಗುಂದಲಾರ.

**ಸೃಷ್ಟಿ**

ಮೀನಿನ ಬಾಲ, ಹಕ್ಕಿಯ ರೆಕ್ಕೆ, ಸಿಂಹದ ಕೇಸರ ಇವೆಲ್ಲ ಆಯಾ ಜೀವಿಗಳ ಭಾಗಗಳಾದರೂ ಅವನ್ನೇ ಕ್ರಮವಾಗಿ ಮೀನು, ಹಕ್ಕಿ ಅಥವಾ ಸಿಂಹ ಎಂದು ಕರೆಯಲಾಗುವುದಿಲ್ಲ. ಹಾಗೆಂದು ಆಯಾಭಾಗಗಳಿಲ್ಲದಿದ್ದರೆ, ಆ ಪ್ರಾಣಿಗಳು ಬದುಕುವುದು ಕಷ್ಟಸಾಧ್ಯ. ಸೃಷ್ಟಿಯಲ್ಲೂ ಸಹ ಇದನ್ನೇ ಕಾಣುತ್ತೇವೆ. ಪ್ರತಿ ಅಣು–ಕಣವೂ ಸೃಷ್ಟಿಯ ಒಂದು ಭಾಗ. ಒಂದು ಭಾಗ ಕಳೆದರೂ ಅಥವಾ ಯಾವುದೇ ಭಾಗ ನಾಶವಾದರೂ ಸೃಷ್ಟಿ ಅಪೂರ್ಣ.

**ಕ್ರಿಕೆಟ್**

ಅ. ಬ್ಯಾಟು ನೇರವಿದ್ದಷ್ಟೂ ಹೆಚ್ಚು ರನ್ ಗಳಿಸಲು ಸಾಧ್ಯ. ಹಾಗೇ ನಮ್ಮ ನಡೆನುಡಿಗಳು ನೇರವಿದ್ದಷ್ಟೂ ಜೀವನದಲ್ಲಿ ಹೆಚ್ಚಿನ ಗೆಲುವುಗಳನ್ನು ಸಾಧಿಸಲು ಸಾಧ್ಯವಿಲ್ಲ.

ಆ. ನಮಗೆ ರನ್ ತಂದುಕೊಟ್ಟ ಚೆಂಡು ಮರುಕ್ಷಣದಲ್ಲಿ ನಮ್ಮ ವಿಕೆಟ್ ಉರುಳಿಸಬಹುದು. ಮನಸ್ಸೂ ಅಷ್ಟೇ, ನಮ್ಮನ್ನು ಖಿನ್ನರನ್ನಾಗಿಸಿ ದಯಾಹೀನರನ್ನಾಗಿ ಮಾಡಬಹುದು ಅಥವಾ ಅದೇ ಮನಸ್ಸು ನಮ್ಮನ್ನು ಶಕ್ತಿಯುತ ಸಹನಾಮೂರ್ತಿಗಳನ್ನಾಗಿಸಿ ದಯಾಮಯಿಗಳನ್ನಾಗಿ ಮಾಡಬಹುದು.

**ಅಡ್ಡದಾರಿಗಳು**

ನಾನು ಹುಡುಗನಾಗಿದ್ದಾಗ ಗೆಳೆಯರ ಜೊತೆ ಗೋಲಿ ತಿರುಗಿಸುವ ಆಟವಾಡುತ್ತಿದ್ದೆ. ಹೆಬ್ಬೆರಳು ಮತ್ತು ತೋಳುಬೆರಳುಗಳ ಮಧ್ಯೆ ಬಿಗಿಯಾಗಿ ಹಿಡಿದ ಗೋಲಿಯನ್ನು ಬಿಟ್ಟರೆ ಅದು ಗಿರಗಿರ ತಿರುಗುವ ರಭಸಕ್ಕೆ ಎರಡು ಗೋಲಿಗಳಿವೆಯೇನೋ ಎಂದು ಭಾಸವಾಗುತ್ತಿತ್ತು. ಈಗ ಅದನ್ನು ಕುರಿತು ಯೋಚಿಸಿದರೆ ಜೀವನದ ಯಾವುದೋ ಆಯಾಮದ ರೂಪಕದಂತೆ ತೋರುತ್ತದೆ. ಬೇರೆಯವರನ್ನು ಕುರಿತು ದುರು(ದೂರದು)ದ್ದೇಶಗಳಿದ್ದಲ್ಲಿ ಪರಸ್ಪರ ಅನ್ಯೋನ್ಯತೆ



ನಮ್ಮ ಬೆರಳುಗಳಂತೆ ಸೆಟೆದು ನಿಲ್ಲುತ್ತದೆ ಮತ್ತು ನಮ್ಮ ಅತ್ಯುಕ್ತಿಯು ಇರುವುದನ್ನು ಮತ್ತೂ ದೊಡ್ಡದನ್ನಾಗಿ ತೋರುತ್ತದೆ.

**ಮೋಸ**

ಅ. ಪರರಿಗೆ ಮೋಸ ಮಾಡುವುದರಲ್ಲಿ ಗೆದ್ದಿದ್ದೇವೆ ಎಂದು ಅನಿಸಿದ ಕ್ಷಣವೇ ನಮಗೆ ನಾವೇ ಮೋಸ ಮಾಡಿಕೊಳ್ಳುತ್ತಿದ್ದೇವೆಂದು ಅರ್ಥ.

ಆ. ನಾನು ಖಂಡಿತ ನಂಬುತ್ತೇನೆ ಎಂಬ ಮಾತನ್ನಾಡಿದ ಕ್ಷಣವೇ ಅಪನಂಬಿಕೆಯ ಎಳೆ ಇರುವುದನ್ನೂ ಗೊತ್ತುಪಡಿಸುತ್ತದೆ.

**ಪರಾವಲಂಬನೆ**

ಸಂಕಷ್ಟದ ಸಮಯದಲ್ಲಿ ನಾವು ಯಾರ್‍ಯಾರ ಮೇಲೆ ಅವಲಂಬಿತರಾಗಬಹುದು ಎಂದು ಎಣಿಸುತ್ತ ಹೋಗುವಾಗ ನಾವು ಎಂಥವರು ಎಂಬುದೂ ತಿಳಿಯುತ್ತದೆ. ನಮ್ಮ ಮೇಲೆ ಎಷ್ಟು ಜನ ಅವಲಂಬಿತರಾಗಿದ್ದಾರೆ ಎಂಬುದರ ಮೇಲೆ ನಮ್ಮ ಶಕ್ತಿ ತಿಳಿಯುತ್ತದೆ. ಎಷ್ಟೋ ಬಾರಿ ನಮ್ಮ ಮೇಲೆ ಯಾರೂ ಸಹ ಅವಲಂಬಿತರಾಗಲು ಇಚ್ಛಿಸುವುದಿಲ್ಲ. ಇದಕ್ಕಿಂತ ದೊಡ್ಡ ಜ್ಞಾನೋದಯ ಮತ್ತೊಂದಿಲ್ಲ.

**ಹೆಬ್ಬಯಕೆಗಳು**

ಆಸೆಗಳಿಗೆ ಮಾರುಹೋಗುವುದು ಕಾಣದ ಕಾರಗೃಹ ಬಂಧನಕ್ಕೆ ಒಳಗಾದಂತೆ. ಗುಡಿಸಲೇ ಆಗಲಿ, ಅರಮನೆಯಾಗಲಿ ಆಸೆಗಳಲ್ಲಿ ಬಂಧಿತನಾದವ ಯಾವುದನ್ನು ಹೊಂದಿದ್ದರೂ ಅದು ಕಾರಾಗೃಹವೇ ಸರಿ.

**ವಿಧಿ**

ತನ್ನೆಲ್ಲ ಕ್ರಿಯೆಗಳಿಗೂ ವಿಧಿಯೇ ಕಾರಣ ಎಂದು ನಂಬಿದವನಿಗೆ ತನ್ನ ಸೋಲುಗಳಿಗೆ ಯಾರನ್ನೂ ತೆಗಳುವ ಅವಕಾಶವಿರುವುದಿಲ್ಲ.

**ಹಣೆಬರಹ ಮತ್ತು ಸ್ವ ಇಚ್ಛೆ**

ನದಿಯೊಂದು ಹರಿಯುವುದು ಸ್ವ ಇಚ್ಛೆಯಿಂದಲೋ ಅಥವಾ ಅದರ ಗಮ್ಯಸ್ಥಳ ನಿರ್ದೇಶನದಿಂದಲೋ ಎನ್ನುವುದರ ಮೊದಲು ನದಿ ನದಿಯಾಗುವುದನ್ನು ಗಮನಿಸಬೇಕು. ಸಣ್ಣ ತೊರೆಗಳು ಸೇರಿ ನದಿಯಾಗುತ್ತದೆ, ಸಣ್ಣ ಝರಿಗಳು ಸೇರಿ ಒಂದು ತೊರೆಯಾಗುತ್ತದೆ. ಹೀಗೆ ನೋಡಿದಾಗ ಪ್ರತಿ ಹನಿಯೂ ಸಹ ನದಿಯ ಹುಟ್ಟಿಗೆ ಕಾರಣವಾಗಿರುವುದು ತಿಳಿಯುತ್ತದೆ. ಆದ್ದರಿಂದ ನದಿಯ ಹುಟ್ಟಿನ ಪ್ರಕ್ರಿಯೆಯಲ್ಲಿ

ಅರ್ಧ ಒಡೆದ ಮಳೆ ಹನಿ ಉಪನದಿ, ಝರಿಗಳಷ್ಟೇ ಮುಖ್ಯ ಮತ್ತು ಇದೇ ಹನಿ ಸಮುದ್ರವನ್ನು ಸೇರುತ್ತದೆ– ಹೀಗೆ ಹನಿಯೊಂದು ನದಿಯ ಬದುಕಿಗಷ್ಟೇ ಅಲ್ಲದೆ, ಸಮುದ್ರದ ಹುಟ್ಟಿಗೂ ಕಾರಣವಾಗುತ್ತದೆ. ದೊಡ್ಡದು ಎನ್ನುವುದು ಸಾವಿರಾರು ಸಣ್ಣವುಗಳ ಆಗರವಷ್ಟೆ. ಹೀಗೆ ನಮ್ಮ ಬದುಕಿನಲ್ಲೂ ಸಹ ಕಾಣದ ಸಣ್ಣ ಸಣ್ಣ ವಿಷಯಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ನಮ್ಮ ಬದುಕು ಪ್ರಾರಂಭದಿಂದ ಕೊನೆಯವರೆಗೂ ಸಣ್ಣ ಸಣ್ಣ ಉಸಿರುಗಳ ಮೊತ್ತ ಎಂಬುದನ್ನು ಸದಾ ತಿಳಿದಿರಬೇಕು.

ಈಗ ಹೇಳಿ, ಯಾವುದು ಮುಖ್ಯ? ವಿಧಿಯೋ (ಹಣೆಬರಹ) ಅಥವಾ ಸ್ವ ಇಚ್ಛೆಯೋ? ಮತ್ತು ಎಷ್ಟರಮಟ್ಟಿಗೆ ಅವು ನಮ್ಮ ಬದುಕನ್ನು ನಿರ್ದೇಶಿಸುತ್ತವೆ? ಯಾವುದರ ಪರವಾಗಿ ನಿಂತರೂ ಎಲ್ಲರೂ ಒಂದನ್ನಂತೂ ಒಪ್ಪುತ್ತಾರೆ. ಜೀವನದ ದೊಡ್ಡ ತಿರುವುಗಳನ್ನು ವಿಧಿ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದರೆ, ಸಣ್ಣ ಸಣ್ಣ ಆಗುಹೋಗುಗಳು ಸ್ವ ಇಚ್ಛೆಯಿಂದ ಜರುಗುತ್ತವೆ. ಆದರೆ ಯಾವುವು ದೊಡ್ಡ ಅಥವಾ ಮುಖ್ಯವಾದ ತಿರುವುಗಳು. ಯಾವುವು ಸಣ್ಣ ಅಥವಾ ಸಾಮಾನ್ಯ ವಿಷಯಗಳು ಎಂದು ನಿರ್ಧರಿಸುವುದು ಯಾರಿಂದ ಸಾಧ್ಯ. ಇಂದು ವಿಮಾನಗಳು ನಾಗರಿಕ ಬದುಕಿನ ಸಾಮಾನ್ಯ ವಿಷಯಗಳಾದರೂ ಯಾವ ವಿಮಾನ ದುರಂತಕ್ಕೀಡಾಗುತ್ತದೆಂದು ಯಾರೂ ಮುಂಚೆಯೇ ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಸಾಮಾನ್ಯ ಎನ್ನಿಸುವ (ಸ್ವ ಇಚ್ಛೆಯ ಪರಿಧಿಯೊಳಗೆ ಬರುವ) ವಿಷಯಗಳು ವಿಧಿಯನ್ನು ನಿರ್ಧರಿಸಬಹುದು ಅಥವಾ ವಿಧಿ ಸ್ವ ಇಚ್ಛೆಯನ್ನೋ?

ಆದ್ದರಿಂದ ವಿಧಿ ಮತ್ತು ಸ್ವ ಇಚ್ಛೆ ಇವುಗಳನ್ನು ನಿರ್ದಿಷ್ಟವಾಗಿ ಬೇರ್ಪಡಿಸುವ ರೇಖೆಯನ್ನೆಳೆಯುವುದು ಅಸಾಧ್ಯ. ಎರಡೂ ಸಹ ಮನುಷ್ಯ ಜೀವನದಲ್ಲಿ ಮುಖ್ಯವಾದ ಪಾತ್ರ ವಹಿಸುತ್ತವೆ. ಎರಡೂ ಒಂದರೊಳಗೊಂದು ಮಿಳಿತವಾಗಿಹೋಗಿವೆ ಯಾದ್ದರಿಂದ ಅವೆರಡರಲ್ಲಿ ಯಾವುದು ಮುಖ್ಯ ಎಂದು ಯೋಚಿಸುವುದೇ ಮೂರ್ಖತನ. ಹಗಲು–ರಾತ್ರಿಗಳಂತೆ ಅವು ಒಂದಕ್ಕಾಗಿ ಮತ್ತೊಂದು. ಎರಡಕ್ಕೂ ತಮ್ಮದೇ ಆದ ಮುಖ್ಯ ಪಾತ್ರಗಳಿರುತ್ತವೆ. ವಿಧಿ ಮತ್ತು ಸ್ವ ಇಚ್ಛೆ ಇವುಗಳಲ್ಲಿ ಯಾವುದು ಯಾವುದರ ಕೈಕೆಳಗಿತ್ತು ಎಂದು ತಿಳಿಯಲು ಸಾಧ್ಯವಿಲ್ಲ.

**ಮುಕ್ತತೆ**

ಎಲ್ಲ ಮೋಹಗಳಿಂದ ಮುಕ್ತನಾಗಬೇಕು ಎಂಬುದೂ ಸಹ ಒಂದು ಮೋಹವೇ. ಮುಕ್ತತೆಯ ಮೋಹ.



**ಸರ್ವಾಧಿಕಾರ**

ವೈಯಕ್ತಿಕದ ವಿಸ್ತಾರವೇ ಸಮಾಜ ಆಗಿರುವುದರಿಂದ ಸಣ್ಣವರನ್ನು ಗದರಿಸುವುದು ದೊಡ್ಡವರಿಗೆ ಮಣೆ ಹಾಕುವುದು ಸಾಮಾನ್ಯ. ಹೀಗಾಗಿಯೇ ಸರ್ವಾಧಿಕಾರಗಳು ನಮ್ಮ ಮಧ್ಯೆ ಇವೆ.

**ಆಶಾಭಂಗ**

ಆಶಾಭಂಗದಿಂದ ದುಃಖಿಸುವುದು ಮತ್ತು ಎದೆಗುಂದುವುದು ನಮ್ಮ ಹೃದಯ ಸಂಕುಚಿತತೆಯನ್ನು ತೋರಿಸುತ್ತದೆ.

**ಶಿಸ್ತು**

ಶಿಸ್ತು ನದಿಯ ಹರಿವಿನಂತೆ. ಅದು ತನ್ನ ಹರಿವಿನ ದಿಕ್ಕು ಬದಲಾಯಿಸುವುದು ಪಾತ್ರ ಬದಲಾದರೆ ಮಾತ್ರ. ನದೀಪಾತ್ರವೋ ತನ್ನಲ್ಲಿ ಹರಿಯುವ ನೀರು ಸೃಷ್ಟಿಸಿದ ಕೊರಕಲುಗಳಿಂದ ಬದಲಾಗುತ್ತದೆ ಹೊರತು, ತಾನೇ ತಾನಾಗಿ ಅಲ್ಲ. ಹರಿವು ಸರಿಯಿದ್ದಲ್ಲಿ ಪಾತ್ರವೂ ಸರಿಯಿರುತ್ತದೆ, ಪಾತ್ರ ಸರಿಯಿತ್ತೆಂದರೆ ಹರಿವ ದಿಕ್ಕೂ ಸಹ.

ಹೊರಗಿನಿಂದ ನಮ್ಮ ಮೇಲೆ ಹೇರಿದ ಶಿಸ್ತು ತ್ರಾಸದಾಯಕವಾಗಿರುತ್ತದೆ. ಅದೇ ಶಿಸ್ತನ್ನು ನಾವೇ ಬೆಳೆಸಿಕೊಂಡಿದ್ದಲ್ಲಿ ಅಂತಹ ಹೊರೆಯಿಂದ ತಪ್ಪಿಸಿಕೊಳ್ಳಬಹುದು.

**ಚರ್ಚೆಗಳು**

ಚರ್ಚೆಗಳು ವೈಯಕ್ತಿಕದ ಚೌಕಟ್ಟಿನಿಂದ ಹೊರಗುಳಿದಷ್ಟೂ ಕ್ಷೇಮ. ನಾನು, ನೀನು ಅಥವಾ ನಾವು ಎಂಬ ಅಹಂಪೂರಿತವಾದ ಭಾಷೆಯನ್ನು ಕಡಿಮೆ ಬಳಸಿದಷ್ಟೂ ಮಾತುಕತೆಗಳು ಹೆಚ್ಚಿನ ಫಲ ಕೊಡುತ್ತವೆ.

**ಅಂತರ**

ಸೂರ್ಯನಿಂದ ಅಂತರ ಕಾಪಾಡಿಕೊಂಡಿರುವುದರಿಂದಲೇ ಮೋಡವು ಬದುಕಿರಲು ಮತ್ತು ಸೂರ್ಯನ ಶಕ್ತಿಯುತ ಕಿರಣಗಳನ್ನು ತಡೆಯಲು ಸಾಧ್ಯ.

**ಸಂಶಯ**

ವಿಶಾಲ ಮನಸ್ಸು ಆರೋಗ್ಯವಂತವಾಗಿರುತ್ತದೆ. ಸಂಶಯದ ವಿಷಬೀಜ ಬಿತ್ತೆಂದರೆ ಅದು ಕಲಸುಮೇಲೋಗರವಾಗುತ್ತದೆ.

**ಕನಸು ಮತ್ತು ನಿದ್ದೆ**

ಕನಸುಗಳಲ್ಲಿ ಮಾತ್ರ ನಾವು ತೂಕಡಿಸುವುದಿಲ್ಲ.

**ದ್ವಂದ್ವಗಳು**

ಕರ್ತವ್ಯ ಮತ್ತು ಆತ್ಮಸಾಕ್ಷಿ ಇವುಗಳಲ್ಲಿ ಯಾವುದಕ್ಕೆ ನಿಷ್ಠನಾಗಿರಬೇಕು ಎಂಬ ಸಂದಿಗ್ಧ ಪರಿಸ್ಥಿತಿಗಳಿಂದ ಮುಕ್ತನಾಗುವವರೆಗೂ ಮನುಷ್ಯ ಭೌತಿಕವಾಗಿ ಮಾತ್ರ ಏಕವ್ಯಕ್ತಿ.

**ಶಿಕ್ಷಣ**

ಶಿಕ್ಷಣ ಮನುಷ್ಯನನ್ನು ಸಮಾಜದ ಉತ್ತಮ ಪ್ರಜೆಯಾಗಿಸಬೇಕಷ್ಟೇ ಅಲ್ಲದೆ, ತಾನು ಎಂದಿಗೂ ಸಮಾಜಕ್ಕೆ ಹೊರೆಯಾಗಬಾರದು ಎಂಬ ಅರಿವು ಮೂಡಿಸಬೇಕು.

**ಸಾಮರ್ಥ್ಯ**

ದೇಶದ ಬೆಳವಣಿಗೆಯು ಸರ್ಕಾರ ನೋಡುವ ಬರಿ ಸಮಾಜದ ಮೇಲ್ಪದರದ ಬೆಳವಣಿಗೆಯಲ್ಲ; ಬದಲಾಗಿ ಅದು ದೇಶದ ಪ್ರತಿ ಪ್ರಜೆಯ ಸಾಮರ್ಥ್ಯದ ಬೆಳವಣಿಗೆ. ಕೋಟಿ ಪ್ರಜೆಗಳು ಸೇರಿದರೆ ರಾಷ್ಟ್ರವಾದ್ದರಿಂದ, ಪ್ರತಿ ಪ್ರಜೆಯೂ ದೇಶದ ಅವಿಭಾಜ್ಯ ಅಂಗ. ದೊಡ್ಡ ಯಂತ್ರದ ಒಂದೇ ಒಂದು ಸ್ಕ್ರೂ ಕಳೆದರೂ ಅದು ಸರಿಯಾಗಿ ಕೆಲಸ ಮಾಡಲಾರದು.

ವ್ಯಕ್ತಿಯೊಬ್ಬನ ಸಾಮರ್ಥ್ಯವು ಸಮಾಜ ಬಯಸಿದ ಸಾಮರ್ಥ್ಯಕ್ಕಿಂತ ಕಡಿಮೆಯಿದ್ದರೆ ಅಥವಾ ಎರಡಕ್ಕೂ ಹೊಂದಿಕೆಯಾಗಿದ್ದರೆ ಸಮಾಜದ ಸ್ವಾಸ್ಥ್ಯ ಹೆಚ್ಚು ದಿನ ಇರುವಂಥದಲ್ಲ ಎಂದು. ಅಂಥ ಸಮಾಜ ಅಥವಾ ದೇಶವು ಪೊಳ್ಳುತನದಿಂದ ಕೂಡಿರುತ್ತದೆ.

**ಉದ್ಯೋಗ**

ಉದ್ಯೋಗ ಅಥವಾ ನೌಕರಿಯ ಸರಿಯಾದ ವ್ಯಾಖ್ಯಾನ ಹೀಗಿದೆ: ಉದ್ಯೋಗವೆಂದರೆ ನಮ್ಮ ಗರಿಷ್ಠ ಸಮಯವನ್ನು ವಿನಿಯೋಗಿಸಲು ಏನಾದರೂ ಇರುತ್ತದೆ ಹಾಗೂ ಏನೂ ಮಾಡದೆ ಇರುವ ಸಮಯ ಕನಿಷ್ಠ ಮಟ್ಟದ್ದಾಗಿರುತ್ತದೆ.

**ಗುರಿ ಮತ್ತು ದಾರಿ**

ನಾವು ಹಿಡಿದ ದಾರಿಯು ನಮ್ಮ ಗುರಿಯನ್ನು ಸಮರ್ಥಿಸಬೇಕು ಎಂಬ ವಾದ ನ್ಯಾಯಯುತವಾಗಿದ್ದೇ ಆದರೆ, ಗುರಿಯು ದಾರಿಯನ್ನು ಸಮರ್ಥಿಸಬೇಕು



ಎಂಬ ವಾದವು ನ್ಯಾಯಕ್ಕೆ ವಿರುದ್ಧವಾಗಿದ್ದರೆ, ಮತಪೆಟ್ಟಿಗೆ ವ್ಯವಸ್ಥೆಯನ್ನು ಬದಲಾಯಿಸಬೇಕಲ್ಲವೆ? ಏಕೆಂದರೆ ಮತಪೆಟ್ಟಿಗೆ ಜನಮತವನ್ನೇ ತಿಳಿಸುವುದಾದರೂ ಅಲ್ಲಿ ಮತಗಳು ವೈಯಕ್ತಿಕ ಮತ್ತು ಗುಟ್ಟಾಗಿ ಸಂಗ್ರಹವಾಗುತ್ತವೆ.

**ಸಮಾನತೆ**

ಸಮಭಾವ ಸಮಾನತೆಗೆ ಕಾರಣವಾಗುತ್ತದೆ. ಆದರೆ ಸಮಾನತೆಗೆ ಸಮಭಾವ ಅವಶ್ಯಕ ಎಂದಲ್ಲ. ಉದಾಹರಣೆಗೆ ನಾಲ್ಕು ಮತ್ತು ಒಂದು ಸೇರಿದರೆ ಐದಾಗುತ್ತದೆ. ಆದರೆ ಮೂರು ಮತ್ತು ಎರಡು ಸೇರಿದಾಗ ಕೂಡ ಆಗುವುದು ಐದೇ. ಹಾಗಾಗಿ ಸಮಾನತೆ ಕೂಡ ಹಲವು ರೀತಿಯಲ್ಲಿ ವಿಭಿನ್ನ ಅವಸ್ಥೆಗಳ, ವಿಭಿನ್ನ ಮನಃಸ್ಥಿತಿಗಳ ಗುಂಪಾಗಿರುತ್ತದೆ. ಆ ಗುಂಪು ಒಟ್ಟು ಸೇರಿ ಸಮಾನತೆಗೆ ಎಡೆ ಮಾಡುತ್ತದೆ.

**ವ್ಯಾಯಾಮ**

ವ್ಯಾಯಾಮ ಸಹ ಊಟದಂತೆ. ಹೆಚ್ಚು ವ್ಯಾಯಾಮ ಮಾಡಿದಷ್ಟೂ ಹೆಚ್ಚು ಬಲಿಷ್ಠರಾಗಿರುತ್ತೇವೆ ಎಂದುಕೊಳ್ಳುವುದು ಹೆಚ್ಚು ಉಂಡಷ್ಟೂ ಪುಷ್ಟವಾಗುತ್ತೇವೆ ಎಂಬ 'ಮೂಢ'ನಂಬಿಕೆಯಂತೆ.

**ಅಸ್ತಿತ್ವ**

ಬದುಕಿನ ಪ್ರತಿಕ್ಷಣವೂ ನಾವು ಪ್ರಗತಿ ಹೊಂದುತ್ತಿರಬೇಕು. ಇಲ್ಲದಿದ್ದರೆ ನಾವು ನಿಂತ ನೀರಂತೆ. ಸೊಳ್ಳೆಗಳು ಮೊಟ್ಟೆ ಇಡಲು, ಪಾಚಿ ಕಟ್ಟಿ ಹೇಸಿಗೆ ಹುಟ್ಟಲು ಸಹಾಯಕವಾಗುತ್ತೇವೆ.

**ಸತ್ಯದರ್ಶನ**

ಒಂದು ಶಬ್ದ ಅಥವಾ ಸ್ವಾದಕ್ಕೆ ನಿಖರವಾದ ಅರ್ಥವ್ಯಾಖ್ಯಾನ ಸಾಧ್ಯವಿಲ್ಲ. ಕಿವಿಯಲ್ಲಿ ಕೇಳಿದಾಗ, ನಾಲಿಗೆಯಲ್ಲಿ ರುಚಿನೋಡಿದಾಗಲೇ ಶಬ್ದ ಮತ್ತು ಸ್ವಾದಗಳು ತಿಳಿಯುವುದು. ಸತ್ಯ ಕೂಡ ಹಾಗೆಯೇ. ಅದನ್ನು ನೋಡಲು ಸಾಧ್ಯವಿಲ್ಲ ಅನುಭವಿಸಲು ಮಾತ್ರ. ಪಂಡಿತರು ಮತ್ತು ಶಾಸ್ತ್ರಗಳು ಸತ್ಯವನ್ನು ಮನಗಾಣಿಸಲು ಎಷ್ಟೇ ಪ್ರಯತ್ನಿಸಿದರೂ ಸ್ವಪ್ರೇರಣೆಯಿಲ್ಲದೆ ಅದು ಸಾಧ್ಯವಿಲ್ಲ. ಏಕೆಂದರೆ ಪಂಡಿತರು ಅಥವಾ ಶಾಸ್ತ್ರಗಳು ಅದರ ವ್ಯಾಖ್ಯಾನ ನೀಡುವುದಿಲ್ಲ. ಬದಲಾಗಿ ತಮ್ಮ ವೈಯಕ್ತಿಕ ಅನುಭವವನ್ನು ಹೇಳುತ್ತವೆಯಷ್ಟೆ.

**ಬಟ್ಟೆ**

ಬಟ್ಟೆ ನೇಯುವಾಗ ಅಡ್ಡ ಮತ್ತು ಉದ್ದ ಎರಡೂ ದಿಕ್ಕುಗಳ ನೂಲುಗಳೂ ಅವಶ್ಯಕ. ಬೇರೆ ಬೇರೆ ದಿಕ್ಕುಗಳ ನೂಲಾದರೂ ಸಹ ಅವು ಒಂದಕ್ಕೊಂದು ಸಹಕರಿಸುತ್ತ ಇಡೀ ಬಟ್ಟೆಯ ಪರಿಪೂರ್ಣತೆಗೆ ಕಾರಣವಾಗುತ್ತವೆ. ರಾಜಕೀಯದಲ್ಲೂ ಸಹ ಆಳುವ ಮತ್ತು ವಿರೋಧ ಪಕ್ಷಗಳು ಕೇವಲ ಕೆಸರೆರೆಚಾಟದಲ್ಲಿ ಮುಳುಗಿ ವಿರೋಧಿಗಳ ಕಾಲನ್ನೆಳೆಯದೆ ಪರಸ್ಪರ ಸಹಕಾರ ನೀಡಬೇಕು. ಆಗ ಮಾತ್ರ ಸಮಾಜ ಎಂಬ ಸ್ವಾಸ್ಥ್ಯಕರವಾದ ಬಟ್ಟೆಯೊಂದನ್ನು ನೇಯಲು ಸಾಧ್ಯ.

**ಬದುಕು ಮತ್ತು ವಾಸ್ತವ**

ಬದುಕಿನ ವಾಸ್ತವತೆಯನ್ನು ಸಮಾಜಕ್ಕೆ ತಿಳಿಸುವುದು ಒಂದು ದೊಡ್ಡ ಸಮಾಜ ಸೇವೆಯೇ ಸರಿ. ಅರಿಯಲಾಗದ ಭವಿಷ್ಯದ ಕುರಿತು ಕನಸುಗಳ ಪೊಳ್ಳು ಬಂಗಲೆಗಳನ್ನು ಕಟ್ಟಿಕೊಡುವ ಬದಲು ಕಹಿಯಾದರೂ ಸರಿ, ಸತ್ಯಾಂಶಗಳನ್ನು ತಿಳಿಸಿಕೊಡುವುದು ಒಳಿತು.

**ಸೋಲು–ಗೆಲುವು**

ಸೋಲು ನಮ್ಮನ್ನು ಗೆಲುವಿನ ದಾರಿಗೆ ತಳ್ಳುವ ಗೆಳೆಯನಾಗಬಹುದು; ಹಾಗೆಯೇ ಗೆಲುವು ನಮ್ಮನ್ನು ಸೋಲಿನ ದಾರಿಗೊಯ್ಯುವ ಶತ್ರುವಾಗಬಹುದು. ಗೆಲುವು ನಮ್ಮನ್ನು ಆಕಾಶದೆತ್ತರಕ್ಕೊಯ್ದು ಕೈಬಿಟ್ಟಾಗ ಮತ್ತೆ ಏಣಿಯ ಮೊದಲ ಮೆಟ್ಟಿಲಿನಿಂದ ಹತ್ತಬೇಕು.

**ಆತಂಕ**

ನಿಜವಾಗಿಯೂ ಭಯಪಡಬೇಕಾದ ಸಂಗತಿಗಳಿಂದ ನಮ್ಮನ್ನು ನಾವು ದೂರ ಇಡುವಷ್ಟು ಬುದ್ಧಿಮತ್ತೆ ಇದ್ದು, ಮುಂದೆ ಬರಬಹುದಾದ ಆಪತ್ತನ್ನು ಕಲ್ಪಿಸಿಕೊಂಡು ಭಯಪಡುವ ಅತಿಬುದ್ಧಿವಂತಿಕೆ ಇರದಿದ್ದರೆ ನಾವು ಯಾವುದಕ್ಕೂ ಹೆದರಬೇಕಾಗಿಲ್ಲ. ಇದೆಲ್ಲದರ ಹೊರತು ಹೆದರಿದರೆ ಅದಕ್ಕೆ ಕಾರಣ ನಮಗೆ ನಾವೇ ಎಲ್ಲೋ ತೊಂದರೆ ಮಾಡಿಕೊಂಡಿದ್ದೇವೆಂದು ಅರ್ಥ.

**ಒಡನಾಟ ಮತ್ತು ಜಪಮಾಲೆ**

ನೂರಾರು ಮಣಿಗಳ ಒಡನಾಟದಿಂದ ಉಂಟಾದ ಸರದಲ್ಲಿ ರುದ್ರಾಕ್ಷಿ ಅಲಂಕರಿಸಲ್ಪಡುವುದು. ಇಡೀ ಮನುಷ್ಯನ ಜೀವನ ಸರ ಪೋಣಿಸುವ ದಾರದಂತೆ. ಅವನ ಎಲ್ಲ ಕ್ರಿಯೆಗಳೂ ದಾರದ ಮಣಿಗಳು, ದಾರಕ್ಕೂ ಮಣಿಗೂ ಹಾಗೂ



ಪರಸ್ಪರ ಮಣಿಗಳ ಮಧ್ಯೆ ಒಳ್ಳೆಯ ಒಡನಾಟವಿದ್ದಲ್ಲಿ ಇಡೀ ಪ್ರಪಂಚವೇ ಜಪಮಣಿ (ರುದ್ರಾಕ್ಷಿ)ಯಾಗಿ ಆ ಮಾಲೆಯನ್ನು ಅಲಂಕರಿಸುವುದು.

**ಕೆಲವು ಮತ್ತು ಹಲವು**

ಅಗತ್ಯವಿರುವ ಕೆಲವೇ ವಸ್ತುಗಳನ್ನು ಹೊಂದಿರುವುದು, ಅವಶ್ಯಕವಿರದ ಮತ್ತು ರದ್ದಿ ಎನ್ನಿಸುವ ಹಲವು ವಸ್ತುಗಳನ್ನು ಹೊಂದಿರುವುದಕ್ಕಿಂತ ಕ್ಷೇಮ.

**ವಿಶ್ವಾಸಘಾತಕ**

ವಿಶ್ವಾಸಘಾತಕನ ಮೊದಲ ಕೊರತೆ ಆತ್ಮವಿಶ್ವಾಸ ಇಲ್ಲದಿರುವುದು ಮತ್ತು ಇತರರಲ್ಲಿ ನಂಬಿಕೆಯಿಲ್ಲದಿರುವುದು.

**ಆಹಾರ**

ಸಮಯಕ್ಕೆ ಸರಿಯಾಗಿ ಹಸಿವಾಗಿ ತಿನ್ನುವುದು ಆರೋಗ್ಯದ ಲಕ್ಷಣ. ಹೆಚ್ಚು ತಿನ್ನುವುದಿಲ್ಲ.

**ಪರ**

ತನ್ನನ್ನು ತಾನು ಬಲ್ಲವನಿಗೆ ಯಾವುದೂ, ಯಾರೂ ಪರ ಎನಿಸುವುದಿಲ್ಲ.

**ಪರನಾಡು**

ಪರದೇಶದಲ್ಲಿ ನಮ್ಮ ಊರಿನವರು ಅಥವಾ ಭಾಷೆಯವರು ಸಿಕ್ಕರೆ ಪರಸ್ಪರ ಸ್ನೇಹ ಬಲುಬೇಗ ಬೆಳೆಯುತ್ತದೆ. ಇಡೀ ಭೂಮಿಯೇ ಪರದೇಶ ಎಂದುಕೊಂಡರೆ ಇಲ್ಲಿರುವವರೆಲ್ಲರನ್ನು ಪ್ರೀತಿಸಲು ಸುಲಭವಾಗುವುದೇನೋ?

**ಮನಸ್ಥೈರ್ಯ**

ಹಸಿವಾದಾಗ ಆಹಾರ ಸಿಗದಿರುವುದನ್ನು, ಅತಿಯಾಗಿ ಬಾಯಾರಿದಾಗ ನೀರು ಸಿಗದಿರುವುದನ್ನು, ನೆರಳಿಲ್ಲದಿದ್ದಾಗ ತಂಗಲು ಜಾಗ ಕೊಡದಿರುವುದನ್ನು ಅಸಹಾಯಕ ಸ್ಥಿತಿಯಲ್ಲಿ ಯಾರೂ ಅನುಕಂಪ ತೋರದಿರುವುದನ್ನು, ಅನ್ಯಾಯಕ್ಕೊಳಗಾದಾಗ ನ್ಯಾಯ ಕೊಡದಿರುವುದನ್ನು ಮತ್ತು ಅಧಿಕಾರ ಚಲಾಯಿಸುವ ಮಹದಾಸೆಯಿದ್ದಾಗಲೇ ಅಧಿಕಾರ ಕಿತ್ತುಕೊಂಡದನ್ನು– ಇವೆಲ್ಲವನ್ನು ಸಂತೋಷವಾಗಿ ಒಪ್ಪಿಕೊಂಡು ಮುನ್ನಡೆದರೆ ನಿಮ್ಮ ಮನಸ್ಥೈರ್ಯ ಹಲವು ಮಹಾಯುದ್ಧಗಳನ್ನು ಗೆದ್ದಿದೆ ಎಂದರ್ಥ.

**ಪುಣ್ಯವಂತ**

ಕೊಡುವ ಮನಸ್ಸಿದ್ದಾಗ ಕೊಡಲು ಶಕ್ಯನಾಗಿದ್ದು, ಕೊಡಲು ಶಕ್ಯನಾಗಿದ್ದು ಕೊಡುವ ಮನಸ್ಸೂ ಇದ್ದರೆ ಅಂತಹ ಪುಣ್ಯವಂತ ಮತ್ತೊಬ್ಬನಿಲ್ಲ.

**ಸ್ವಚ್ಛಂದತೆ**

ಸ್ವಚ್ಛಂದ ಮನಸ್ಸು ಜೀವನ ಗೆಲ್ಲುವ ಅತಿವೇಗದ ಕುದುರೆಯೇನೋ ಹೌದು. ಆದರೆ ಆ ಕುದುರೆಗೆ ಯಾವುದೇ ಲಗಾಮಿಲ್ಲದಿದ್ದರೆ ಅಪಾಯ ಕಟ್ಟಿಟ್ಟಬುತ್ತಿ.

**ಪೂರ್ಣ ಮತ್ತು ಶುಷ್ಕ**

ಸಂಪೂರ್ಣತೆ ಮತ್ತು ಶುಷ್ಕತೆ ಎರಡಕ್ಕೂ ತಮ್ಮದೇ ಆದ ಕಿಮ್ಮತ್ತಿದೆ. ದೇವ ಮಂದಿರ ಪೂರ್ಣವಾಗಿ ತುಂಬಿದ್ದರೆ, ಅದು ಜನರ ಧಾರ್ಮಿಕ ಮನಃಸ್ಥಿತಿ ಆರೋಗ್ಯತನವನ್ನು ಹೇಳುತ್ತದೆ. ಆದರೆ ಆಸ್ಪತ್ರೆಯೊಂದು ತುಂಬಿದ್ದರೆ? ಹಾಗಾಗಿ ಆಸ್ಪತ್ರೆ ಖಾಲಿಯಿದ್ದಷ್ಟೂ ಜನರ ಆರೋಗ್ಯ ಸ್ಥಿತಿ ಸರಿಯಿದೆ ಎಂದರ್ಥ. ನಮ್ಮ ಸಂಪೂರ್ಣತೆಯೂ ಸಹ ಹೀಗೆಯೇ. ನಮ್ಮ ಜ್ಞಾನವು ಪ್ರಪಂಚದ ಅಪೂರ್ಣ ಮತ್ತು ಶುಷ್ಕತೆಯನ್ನು ಅರಿಯುವುದರಿಂದ ಯಾವುದೇ ಪ್ರಯೋಜನವಿಲ್ಲ. ಬದಲಾಗಿ ಆ ಶುಷ್ಕತೆಯ ಹಿಂದಿರುವ ಚೈತನ್ಯವನ್ನು ಅರಿಯುವುದರಲ್ಲಿದೆ.

**ಕುಡುಗೋಲು**

ಕುಡುಗೋಲಿನಲ್ಲಿ ಮರ ಕುಯ್ಯುವುದು ಸೂಜಿಯಲ್ಲಿ ಕತ್ತಿವಿದ್ಯೆ ಆಡುವುದರಷ್ಟೇ ಅಸಾಧ್ಯ ಕೆಲಸ. ಎರಡೂ ಉಕ್ಕಿನಲ್ಲಿ ಮಾಡಲ್ಪಟ್ಟವಾದರೂ ಅವುಗಳ ಕಾರ್ಯ ಬಹಳ ವ್ಯತ್ಯಾಸವಾದದ್ದು. ಪ್ರತಿಯೊಂದಕ್ಕೂ, ಪ್ರತಿಯೊಬ್ಬರಿಗೂ ತಮ್ಮದೇ ಆದ ಕೆಲಸವಿರುತ್ತದೆ ಮತ್ತು ಅವರಷ್ಟು ಕ್ಷಮತೆಯಿಂದ ಅದನ್ನು ಮತ್ತೊಬ್ಬರು ಎಂದೂ ಮಾಡಲಾರರು.

**ಹಾರ**

ಸುಂದರ ಹಾರವೊಂದನ್ನು ಮಾಡಲು ಒಳ್ಳೆಯ ಹೂಗಳನ್ನು ಆರಿಸಿ ಕಟ್ಟಬೇಕೇ ಹೊರತು ಹಾರದಷ್ಟೇ ದೊಡ್ಡ ಹೂವನ್ನು ಹುಡಕಬೇಕಿಲ್ಲ. ಸುಂದರ ವಾಕ್ಯವೊಂದನ್ನು ರಚಿಸಲು ದೊಡ್ಡ ದೊಡ್ಡ ಪದಗಳು ಬೇಕಿಲ್ಲ, ಎಲ್ಲರಿಗೂ ಅರ್ಥವಾಗುವ ನಾಲ್ಕಾರು ಪದಗಳು ಸಾಕು. ಜೀವನದ ತುಂಬ ಅತಿದೊಡ್ಡ ಘಟನೆಗಳು ಜರುಗಿ ನಮ್ಮ ಬದುಕನ್ನು ಶ್ರೀಮಂತಗೊಳಿಸಬೇಕಿಲ್ಲ. ಪ್ರತಿಕ್ಷಣವನ್ನೂ ನಾವು ಎಷ್ಟು ದೊಡ್ಡದಾಗಿ ಆಚರಿಸಿದ್ದೇವೆಂಬ ಆಧಾರದ ಮೇಲೆ ಜೀವನ ಶ್ರೀಮಂತಗೊಳ್ಳುತ್ತದೆ.



**ಔದಾರ್ಯ**

ನಾವು ಎಷ್ಟು ದಾನವಿತ್ತಿದ್ದೇವೆ ಎಂಬುದಕ್ಕಿಂತ ನಾವಿನ್ನೂ ಎಷ್ಟು ಕೊಡಬಹುದು, ಆದರೆ ಕೊಡುತ್ತಿಲ್ಲ ಎಂದು ಅಳೆಯುವುದು ನಮ್ಮ ಔದಾರ್ಯದ ಸರಿಯಾದ ಮೌಲ್ಯಮಾಪನ.

**ದಾನ**

ಬಾಗಿಲಿಗೆ ಬರುವ ಭಿಕ್ಷುಕನಿಗೆ ನಾಲ್ಕಾಣೆ ಭಿಕ್ಷೆಯನ್ನು ಹಲವಾರು ರೀತಿಯಲ್ಲಿ ಕೊಡಬಹುದು. ಹೊಸ್ತಿಲೊಳಗೆ ನಿಂತುಕೊಂಡು ಆತನ ಕೈಗೆಸೆಯುವುದು. ಕೈಯೆತ್ತಿ ಮೇಲಿನಿಂದ ಎತ್ತಿ ಹಾಕುವುದು. ಕೈಚಾಚಿ ಕೊಡುವುದು ಅಥವಾ ಮೆಟ್ಟಿಲಿಳಿದು ಆತನ ಹತ್ತಿರ ಹೋಗಿ ಕೈಯೊಳಗೆ ಕೈಯಿಟ್ಟು ಕೊಡುವುದು. ಪ್ರತಿ ರೀತಿಯೂ ತನ್ನದೇ ಆದ ಅರ್ಥಗಳನ್ನು ಅಂಟಿಸಿಕೊಂಡಿರುತ್ತದೆ.

ನಮ್ಮ ಭಾವಭಂಗಿಗಳು ನಮ್ಮ ಮನಸ್ಸನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಕೊಡುವಾಗ ಸಂತೋಷದಿಂದ ಕೊಡುವುದು ಒಳ್ಳೆಯದು, ಬಾಗಿಲಲ್ಲಿ ನಿಂತು ಎಸೆಯುವುದಕ್ಕಿಂತ ಕೊಡದಿರುವುದೇ ಒಳಿತು.

**ಶಿಷ್ಟ ಮತ್ತು ದುಷ್ಟ**

ಬೆಳಕಿನ ಕಿರಣ ಹಾದು ಹೋಗುವ ದಾರಿಯಲ್ಲಿ ಏನೇ ಅಡ್ಡ ಬಂದರೂ ಸಹ ಕತ್ತಲೆಯಾಗುತ್ತದೆ. ಶಿಷ್ಟಾಚಾರದ ಹಾದಿಯೂ ಅಂಥದ್ದೇ; ಅಲ್ಲಿ ಬರುವ ಅಡೆತಡೆಗಳು ದುಷ್ಟತನಕ್ಕೆ ಪ್ರೇರೇಪಿಸಬಹುದು. ಇಂತಹ ಪ್ರೇರೇಪಣೆಗಳನ್ನು ಮೀರಿ ಶಿಷ್ಟ ಮಾರ್ಗದಲ್ಲಿ ನಮ್ಮನ್ನು ನಾವು ಕಾಪಾಡಿಕೊಳ್ಳುವುದು ನಮ್ಮ ಕೈಯಲ್ಲಿರುತ್ತದೆ.

**ಸರ್ಕಾರಗಳು**

ಯಾವ ರೀತಿಯ ಸರ್ಕಾರ ಉತ್ತಮ ಎಂದು ಕೇಳುವುದು ದಿನದ ಯಾವ ಅವಧಿ ಉತ್ತಮ ಅಥವಾ ವರ್ಷದ ಯಾವ ಮಾಸ ಉತ್ತಮ ಎಂದು ಕೇಳಿದಂತೆ. ಎಲ್ಲ ಕಾಲಗಳೂ, ಮಾಸಗಳೂ ತಮ್ಮದೇ ವೈಶಿಷ್ಟ್ಯ ಹೊಂದಿರುತ್ತವೆ. ದೇಶದ ಜೀವಿತಾವಧಿಯಲ್ಲಿ ಸರ್ಕಾರ ಒಂದರ ಸಮಯ ದಿನದ ಒಂದು ನಿಮಿಷಕ್ಕೆ ಸಮ. ಸಮಾಜ ತನ್ನ ಅರ್ಹತೆಗೆ ತಕ್ಕಂತಹ ಸರ್ಕಾರವನ್ನು ಪಡೆಯುತ್ತದೆ.

**ಕೃಪೆ**

ದೇವರ ಕೃಪೆಯಿಂದ ನಾವು ಅರ್ಹರಲ್ಲದಿದ್ದರೂ ವರ ಪಡೆಯುತ್ತೇವೆ. ಅರ್ಹರಾಗಿದ್ದರೆ, ಅದು ನಮ್ಮ ಅರ್ಹತೆಗೆ ವೇತನ, ಪ್ರತಿಫಲ, ಇನಾಮು ಅಥವಾ

ಪ್ರಶಸ್ತಿ. ಕೆಲವು ಸಲ ಇದೇ ಕೃಪೆ ಕರುಣಿಸುವ ವರಗಳು ಕಿರುಕುಳ, ತೊಂದರೆಗಳಂತಹ ರೂಪದಲ್ಲೂ ಬರಬಹುದು. ಆದರೆ ದೇವರಲ್ಲಿ ನಂಬಿಕೆ ಇಟ್ಟು ತಟಸ್ಥನಾದವನಿಗೆ ತೊಂದರೆಗಳೂ ಒಂದು ರೂಪದಲ್ಲಿ ದೇವರ ಕೃಪೆಯಾಗಿ ಕಾಣುತ್ತವೆ.

**ವ್ಯಾಕರಣ ಮತ್ತು ಉಚ್ಚಾರ**

ಬದುಕಿನ ಉಚ್ಚಾರವನ್ನು ಬಿಟ್ಟು, ವ್ಯಾಕರಣವನ್ನು ಎಲ್ಲರೂ ತಿಳಿದುಕೊಂಡಲ್ಲಿ ಪ್ರಪಂಚವೇ ಸಂತೋಷವಾಗಿರುತ್ತದೆ. ಏಕೆಂಚರೆ ಉಚ್ಚರಣೆ ಸ್ಥಳದಿಂದ ಸ್ಥಳಕ್ಕೆ ಬೇರೆಯಾಗುತ್ತದೆ. ಕಾಲ–ಕಾಲಕ್ಕೆ ಬದಲಾಗುತ್ತದೆ.

**ಧನ್ಯತೆ**

ಧನ್ಯತೆಯ ಬೆಲೆಯು ಬೇರೆಯೇ ರೂಪ ಮತ್ತು ಹೆಚ್ಚು ಮೌಲ್ಯ ಪಡೆಯ ಬೇಕೆಂದರೆ, ಕೊಡುವವನು ಕೊಡುವ ಅವಕಾಶ ದೊರಕಿದುದಕ್ಕೆ ಧನ್ಯನಾಗುವುದರಿಂದ, ಪಡೆದವನು ಪಡೆದ ಕಾರಣದಿಂದ ಧನ್ಯನಾಗುವುದಲ್ಲ.

ಧನ್ಯತಾ ಭಾವದಿಂದ ವಿಮುಕ್ತರಾದ ಕ್ಷಣ ನಾವು ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅಧೋಗತಿಯ ದಾರಿ ಹಿಡಿಯವುದು ಸ್ಪಷ್ಟ.

**ಗುರು ಮತ್ತು ಕೃಪೆ**

ಗುರು ಮಾಡುವ ಪಾಠದ ಸಂಪೂರ್ಣತೆಯೆಂದರೆ ಶಿಷ್ಯ ಅದನ್ನು ಅಳವಡಿಸಿಕೊಳ್ಳುವುದು. ಆದರೆ ಗುರುವಿನ ಈ ಗೆಲುವು ಶಿಷ್ಯನ ಸಾಮರ್ಥ್ಯದಿಂದ ನಿರ್ಧಾರವಾಗುವಂಥದ್ದು. ಹೇಗೆ ಕುದುರೆಯನ್ನು ನೀರ ಬಳಿ ಕರೆದೊಯ್ಯಬಹುದೇ ಹೊರತು ನೀರು ಕುಡಿಸಲು ಸಾಧ್ಯವಿಲ್ಲವೋ ಗುರುವೂ ಸಹ ಪರಮಜ್ಞಾನದ ತೊರೆಯ ಬಳಿಯಷ್ಟೆ ನಮ್ಮನ್ನೊಯ್ಯಬಲ್ಲ. ಆ ಸುಜ್ಞಾನರಸವನ್ನು ಕುಡಿಯುವುದು ನಮಗೆ ಬಿಟ್ಟದ್ದು. ಈ ಹಂತದಲ್ಲಿ ಆ ತೊರೆಯ ಮೌಲ್ಯವನ್ನರಿಯುವಲ್ಲಿ ನಮಗೆ ನಾವೇ ಗುರು. ಹೀಗೆ ಜ್ಞಾನದಾಹವನ್ನು ಇಂಗಿಸುವ ಪ್ರಯತ್ನವನ್ನಷ್ಟೇ ನಾವು ಮಾಡಬಹುದು, ರಸವನ್ನು ಕರುಣಿಸುವುದು ದೇವರಿಗೆ, ಆತನ ಕೃಪೆಗೆ ಬಿಟ್ಟದ್ದು.

**ಆನಂದ**

ನಾವು ಸಂತೋಷವಾಗಿರಲು ಬಯಸಿದ್ದಲ್ಲಿ ನಮಗೆ ಬೇಕಾದ ಎಲ್ಲ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು. ನಮ್ಮನ್ನು ನಾವೇ ರಂಜಿಸಿಕೊಳ್ಳಬೇಕೇ ಹೊರತು ಹೊರಪ್ರಪಂಚದಿಂದ ರಂಜನೆಯನ್ನು ಬಯಸಬಾರದು. ಅಂಥ ರಂಜನೆಗಳನ್ನು



ಬಯಸಲು ನಾವು ಶಕ್ಯರಾದರೂ ಸಹ ಅವುಗಳಿಂದ ದೂರ ಉಳಿಯುವುದು ಲೇಸು.

**ಗರ್ವಿ ಮತ್ತು ದೀನ**

ಅಹಂಕಾರಿಗಳನ್ನು ಸಹಿಸಿಕೊಳ್ಳದಾಗದಿದ್ದರೂ ಸಹ ನಾವು ಅವರನ್ನೇ ಹೆಚ್ಚು ಹತ್ತಿರಕ್ಕೆ ಬಿಟ್ಟುಕೊಳ್ಳುವುದು. ದೀನರನ್ನು ನಾವು ಎಂದೂ ನೋಡುವುದಿಲ್ಲ. ಗರ್ವಿಯ ಬೇಡಿಕೆಯನ್ನು ಆಜ್ಞೆ ಎಂದು ಪರಿಗಣಿಸಿ ನೆರವೇರಿಸುತ್ತೇವೆ. ಆದರೆ ದೀನನ ಕೋರಿಕೆಯನ್ನು ಭಿಕ್ಷೆ ಹಾಕುವುದರಲ್ಲಿ ಕೊನೆಗಳಿಸಿ ಓಡಿಸುತ್ತೇವೆ. ಆದರೂ ಸಹ ನಮ್ಮ ಜೀವನದಲ್ಲಿ ದೀನರಾದವರಿಂದಲೇ ನಾವು ಹೆಚ್ಚನ್ನು ಬಯಸುತ್ತೇವೆ.

**ತಲೆ**

ತಲೆ ನಮ್ಮ ದೇಹದ ಅಧಿಪತಿಯಾದರೂ ಹೃದಯದಂತೆ ಅದನ್ನು ಬಿಚ್ಚಿಡಲು ಬರುವುದಿಲ್ಲ. ತಲೆ ಬೋಳಿಸಿಕೊಳ್ಳುವುದು ನಾವು ಮಾಡಬಹುದಾದ ಕೊನೆಯ ಕೆಲಸ. ಆದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ. ಹೃದಯದ ಭಾವನೆಗಳು ತಲೆಯ ಯೋಚನೆಗಳಷ್ಟು ನಿಗೂಢವಾದವುಗಳಲ್ಲ.

**ಕೇಳುವುದು ಮತ್ತು ಕಿವಿಗೊಡುವುದು**

ಕಿವಿಗೊಟ್ಟಾಗ ಕೇಳಬಹುದು. ಆದರೆ ಕೇಳುವಾಗೆಲ್ಲ ನಾವು ಕಿವಿಗೊಟ್ಟಿರುವುದಿಲ್ಲ. ಕಿವಿಗೊಡುವುದೆಂದರೆ ಜಾಗೃತ ಮನಸ್ಸು ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿ ವಿಷಯದ ಬಗ್ಗೆ ಗಮನ ಹರಿಸುವುದು. ಜಾಗೃತ ಮನಸ್ಸು ಜ್ಞಾನಭಂಡಾರದ ಬೀಗಕ್ಕಿರುವ ಏಕೈಕ ಕೀಲಿಕೈ.

**ಹೃದಯ**

ಅ. ತೆರೆದ ಹೃದಯವು ಮುಚ್ಚಿದುದಕ್ಕಿಂತ ಹೇಗೆ ನಮ್ಮನ್ನು ಅಡೆತಡೆಗಳಿಂದ ರಕ್ಷಿಸುತ್ತದೆಯೋ, ತೆರೆದ ಮನೆಯು ಭದ್ರವಾಗಿ ಮುಚ್ಚಿದುದಕ್ಕಿಂತ ಹೆಚ್ಚಿನ ರಕ್ಷಣೆಯನ್ನು ದರೋಡೆಕೋರನಿಂದ ಒದಗಿಸಬೇಕು.

ಆ. ನಾಲಿಗೆಯ ಮಾತು ಕೆಲವು ವಿಷಯಗಳನ್ನು ತಿಳಿಸಲು ಸಾಧ್ಯವಾಗದಿರ ಬಹುದು, ಆದರೆ ಮನಸ್ಸಿನ ಮಾತು ಎಂದಿಗೂ ಹೆಚ್ಚು ಅರ್ಥವಾಗು ವಂಥದ್ದು ಮತ್ತು ಅರ್ಥಗರ್ಭಿತವಾದದ್ದು.

ಇ. ಎಂದು ಶಿರವು ಹೃದಯವನ್ನು ನಿಯಂತ್ರಿಸಲು ವಿಫಲವಾಗುವುದೋ ಅಂದು ಶಿರವನ್ನು ನಿಯಂತ್ರಿಸುವ ಕೆಲಸವನ್ನು ಹೃದಯಕ್ಕೆ ಕೊಡುವುದು ಬುದ್ಧಿ.

ಈ. ಗಟ್ಟಿತಲೆಯಾದರೂ (ಬುದ್ಧಿವಂತರಾದರೂ) ಸಹ ಕಠಿಣ ಹೃದಯ ನಮ್ಮದಾಗದಂತೆ ಶ್ರಮಿಸಬೇಕು.

**ಎತ್ತರದ ಕೊಂಬೆ**

ಎತ್ತರದಿಂದ ನೋಡುವವನಿಗೆ ಕಾಣುವುದು ಪಕ್ಷಿನೋಟ. ಸಾಮಾನ್ಯನಿಗೆ ಕಾಣುವ ಸಣ್ಣ ಆದರೆ ಮುಖ್ಯವಾದ ವಿಷಯಗಳು ಅವನಿಗೆ ಕಾಣುವುದಿಲ್ಲ.

**ಪ್ರಾಮಾಣಿಕತೆ**

ನಮ್ಮೊಂದಿಗೆ ನಾವು ವಿಶ್ವಾಸದಿಂದಿರುವಾಗ ಮಾತ್ರ ಹೊರ ಜಗತ್ತಿನೊಂದಿಗೆ ವಿಶ್ವಾಸವಾಗಿರಲು ಸಾಧ್ಯ.

**ಆತಿಥೇಯ ಮತ್ತು ಅತಿಥಿ**

ಮನೆಯ ಯಜಮಾನನಾಗಿ ಬಂದವರಿಗೆ ತೃಪ್ತಿ ತರುವ ಸತ್ಕಾರ ನೀಡುವುದು ಕಷ್ಟವಾದರೆ ಉತ್ತಮ ಅತಿಥಿಯಾಗುವುದು ಮತ್ತೂ ಕಷ್ಟ.

**ವಿನಮ್ರತೆ**

ಈ ಭೂಮಿಯ ಎಲ್ಲ ಸೃಷ್ಟಿಯಲ್ಲಿ ನೀರು ಅತಿ ವಿನೀತ. ಎದ್ದುನಿಲ್ಲುವ ಯಾವುದೇ ಮಹದಾಸೆ ತೋರದೆ ದೈನ್ಯವಾದ ಇಳಿಜಾರನ್ನು ಆರಿಸಿಕೊಳ್ಳುತ್ತದೆ. ಹೀಗಾಗಿಯೇ ನೀರಿಗೆ ಅಡೆತಡೆಗಳು ವಿರಳ. ಹಾಗೊಂದು ವೇಳೆ ತಡೆಯಾದರೂ ಸಹ ನೀರಿನ ದೀನಭಾವದ ಭಾರ ತಾಳಲಾರದೆ ದಾರಿ ಬಿಡುವುದಷ್ಟೇ ಅಲ್ಲ, ನೀರಿನ ಶಿಷ್ಯನಾಗಿ ಅದರ ಹಿಂದೆ ಸಾಗುತ್ತದೆ.

**ರೆ,**

ಏನು ಜರುಗಬೇಕೋ ಅದು ಜರುಗಿದ ಮೇಲೆಯೇ ಹಾಗಿದ್ದರೆ, ಹೀಗಿದ್ದರೆ ಎಂಬ ನಮ್ಮ ತರ್ಕಗಳು ಶುರುವಾಗುವುದೆ. ನಾವು ಅಂದುಕೊಂಡಂತೆಯೇ ನಡೆದಿದ್ದರೂ ಸಹ ತೃಣಮಾತ್ರದ ಬದಲಾವಣೆಯಿಂದ ಅಲ್ಲಿ ಬೇರೇನೋ ಜರುಗಿರುತ್ತದೆ. ಮುಗಿದುಹೋದ ಯಾವುದೂ ನಮ್ಮ ಕೈಯಲ್ಲಿಲ್ಲದಿರುವುದರಿಂದ ಅದರ ಕುರಿತ ಮಾತು ವ್ಯರ್ಥ ಕಾಲಕ್ಷೇಪಕ್ಕಷ್ಟೆ ಸೀಮಿತವಾಗುತ್ತದೆ.



**ಪ್ರಥಮ ಮತ್ತು ಅಂತಿಮ**

ಕೆಲವು ಸಂಗತಿಗಳು ಮೊದಮೊದಲು ಇತ್ಯಾತ್ಮಕವಾಗಿ ಕಂಡರೂ ಅಂತಿಮವಾಗಿ ಅವುಗಳಿಂದ ತೊಂದರೆಯಾಗುವುದನ್ನು ಯಾರೂ ತಪ್ಪಿಸಲಾರರು.

**ಅಸಾಧ್ಯ**

ಕೊಳೆಯನ್ನು ಕೊಳೆಯಾದ ವಸ್ತುವಿನಿಂದ ಶುದ್ಧಗೊಳಿಸುವುದು ಅಸಾಧ್ಯ.

**ಘಟನೆಗಳು**

ಘಟನೆಗಳು ವಿಲಕ್ಷಣವಾದಷ್ಟೂ ಅವುಗಳಿಂದ ನಾವು ಹೆಚ್ಚು ಕಲಿಯುತ್ತೇವೆ.

**ಸ್ವಾತಂತ್ರ್ಯ**

ಮನಸ್ಸಿನ ಸ್ವಾತಂತ್ರ್ಯಕ್ಕಿಂತ ಹೆಚ್ಚಿನ ಸ್ವಾತಂತ್ರ್ಯ ಮತ್ತೊಂದಿಲ್ಲ.

**ತೊರೆಯಲಾಗದಿರುವಿಕೆ**

ನಮ್ಮ ಬೆಲೆಯನ್ನರಿತು ನಾವು ವರ್ಜ್ಯವಲ್ಲ ಎಂಬುದನ್ನು ಆಗಾಗ ನೆನಪಿಸಿ ಕೊಳ್ಳುವುದು ಒಳ್ಳೆಯದು.

**ಗಾಯಗಳು**

ನಮಗಾಗುವ ತೊಂದರೆಗಳನ್ನು ಮಾತ್ರ ನಾವು ಬಲ್ಲೆವು. ನಮ್ಮನ್ನು ಎಷ್ಟು ತೊಂದರೆಗಳಿಂದ ಪಾರು ಮಾಡಲಾಗಿದೆ ಎಂಬುದನ್ನು ಮಾತ್ರ ದೇವರೇ ಬಲ್ಲ.

**ನಮ್ಮ ಹಿಡಿತದಲ್ಲಿ**

ಅಗತ್ಯವಾದ ಆಹಾರ ಮತ್ತು ತಕ್ಕನಾದ ಸುಖಸಾಧನಗಳನ್ನು ದೇವರು ಪೂರೈಸಿಯಾದಮೇಲೆ ಸಂತೋಷವಾಗಿರುವುದು– ಬಿಡುವುದು ನಮಗೇ ಬಿಟ್ಟ ವಿಷಯ.

**ಉದ್ದೇಶಗಳು**

ದುರುದ್ದೇಶಗಳು ಅವಿವೇಕತನದಿಂದ ಮಾತ್ರ ವಿಫಲವಾಗಲು ಸಾಧ್ಯ. ಸದುದ್ದೇಶಗಳು ವಿವೇಕತನದಿಂದ ಮಾತ್ರ ಸಫಲವಾಗಲು ಸಾಧ್ಯ.

**ಪರಸ್ಪರ ಅವಲಂಬನೆ**

ಪರಸ್ಪರ ಅವಲಂಬನೆ ಎಂಬುದನ್ನು ಮನುಷ್ಯ ದೇಹದ ಎಲುಬುಗಳನ್ನು ನೋಡಿ, ಅವುಗಳ ಕಾರ್ಯವೈಖರಿಯನ್ನು ಅರಿತು ಕಲಿಯಬಹುದು.

ಅಣೆಕಟ್ಟೆಯೊಂದು ತಾನು ಸಾವಿರಾರು ಜನ ತನ್ನ ಮೇಲೆ ಅವಲಂಬಿತರಾಗಿದ್ದಾರೆಂದು ಬೀಗಬಹುದು. ಆದರೆ ತಾನೂ ಸಹ ಮಳೆಯನ್ನೇ ನಂಬಿರುವ ಪರಾವಲಂಬಿ ಎಂಬುದನ್ನು ಅದು ಮರೆತಿರುತ್ತದೆ.

ಸೌದೆ ತಾನು ಉರಿದು ಬೆಳಕು, ಶಾಖ ಕೊಡುತ್ತೇನೆಂದು ಬೀಗಬಹುದು. ಆದರೆ ತನ್ನನ್ನು ಉರಿಸಲು ಕನಿಷ್ಠ ಒಂದು ಕಿಡಿಯಾದರೂ ಬೇಕು ಎಂಬುದನ್ನು ಅದು ಮರೆತಿರುತ್ತದೆ.

ಮರವು ತಾನು ರಸಭರಿತ ಹಣ್ಣುಗಳನ್ನು ನೀಡುತ್ತೇನೆ ಎಂದು ಬೀಗಬಹುದು, ಆದರೆ ತನ್ನನ್ನು ಹೆತ್ತಿದ್ದು ಒಂದು ಹಣ್ಣು, ಹೊತ್ತಿದ್ದು ಭೂಮಿ ಎಂಬುದನ್ನು ಅದು ಮರೆತಿರುತ್ತದೆ.

**ಸಲಿಗೆ**

ದಯೆ ತೋರಿದ್ದನ್ನು ಸ್ನೇಹ ಅಥವಾ ಎಲ್ಲದಕ್ಕಿಂತ ಮುಖ್ಯವಾಗಿ ಸಲಿಗೆ ಎಂದು ಕಲ್ಪಿಸಿಕೊಳ್ಳದೇ ಇರುವುದು ನಾವು ಹೊಂದಿರಬೇಕಾದ ಅತಿಮುಖ್ಯ ಗುಣಗಳಲ್ಲೊಂದು.

**ಸಂಸ್ಕಾರ**

ನಾವೇನು ತಿನ್ನುತ್ತಿದ್ದೇವೆ ಎಂಬುದು ಸಾಮಾನ್ಯವಾಗಿ ನಮ್ಮ ಗಮನದಲ್ಲಿರುತ್ತದೆ. ಆದರೆ, ತಿಂದದ್ದು ಜೀರ್ಣವಾಗಿ ಹೇಗೆ ರಕ್ತವಾಗುತ್ತದೆ ಎಂಬುದನ್ನು ನಾವು ನೋಡಲಾಗುವುದಿಲ್ಲ. ಆದರೂ ಅರಗಿಸಿಕೊಳ್ಳುವ ಆ ಕ್ರಿಯೆಯೇ ಎಲ್ಲಕ್ಕಿಂತ ಮುಖ್ಯ. ಇದೇ ರೀತಿ, ನಮ್ಮ ಜಾಗೃತ ಮನಸ್ಸಿಗೆ ತಾಕುವುದಕ್ಕಿಂತ ಅರ್ಧ ಸ್ಮೃತಿ ಅಥವಾ ಒಳ ಸ್ಮೃತಿಗೆ (ಸಬ್ ಕಾನ್ಷಿಯಸ್) ತಾಕುವ ವಿಷಯಗಳೇ ಅತಿ ಮುಖ್ಯ. ಇದನ್ನು ಅರಿತರೆ ಸಂಸ್ಕಾರಕ್ಕೆ ತರ್ಕಕ್ಕಿಂತ ಹೆಚ್ಚಿನ ಬೆಲೆಯಿರುವುದು ತಿಳಿಯುತ್ತದೆ. ಏಕೆಂದರೆ ಸಂಸ್ಕಾರ ನಮ್ಮ ಒಳಸ್ಮೃತಿಯ ಭಾಗವಾದರೆ, ತರ್ಕ ಜಾಗೃತ ಮನಸ್ಸಿನದು.

**ಶೋಧನೆಗಳು**

ನಾನು ಏನನ್ನಾದರೂ ಶೋಧಿಸಿದ ನಂತರ ಶೋಧಿಸುವ ಚಿಂತನೆ ಏಕೆ ಬಂತು, ನನಗೇ ಏಕೆ ಬಂತು, ತಡವಾಗಿಯೂ ಅಲ್ಲದೆ, ಅವಸರದಲ್ಲೂ ಅಲ್ಲದೆ ಇಂಥದ್ದೇ ಸಮಯದಲ್ಲೇ ಏಕೆ (ಹೇಗೆ) ಬಂತು ಎಂದು ಹೇಳಲು ಸಾಧ್ಯವಾಗದಿದ್ದಲ್ಲಿ ಅದನ್ನು ಶೋಧಿಸಿದ್ದು ನಾನು ಎಂಬ ಗೌರವವನ್ನೊಪ್ಪಿಕೊಳ್ಳಲು ನನಗೆ ಯಾವ ಅರ್ಹತೆಯೂ ಇರುವುದಿಲ್ಲ.



**ಇಸಮ್‌ಗಳು (ತತ್ವಗಳು)**

ಎಲ್ಲ ತತ್ವಗಳಿಗಿಂತ ಮನುಷ್ಯತ್ವ ಮನುಷ್ಯನಿಗೆ ಅತಿ ಶ್ರೇಷ್ಠವಾಗಿ ಹೊಂದುತ್ತದೆ.

**ಆಭರಣಗಳು**

ದೇಹಕ್ಕೆ ಚಿನ್ನಾಭರಣಗಳನ್ನು ಧರಿಸುವುದಕ್ಕಿಂತ ಮನಸ್ಸಿಗೆ ಜೀವನ ಮೌಲ್ಯಗಳನ್ನು ತೊಡಿಸುವುದು ಉತ್ತಮ.

**ನ್ಯಾಯ**

ಒಂದು ವಾದವನ್ನು ಮಾತ್ರ ಆಲಿಸಿ ತೀರ್ಪು ಕೊಡುವುದು ನ್ಯಾಯವಲ್ಲ.

**ನ್ಯಾಯ, ತರ್ಕ ಮತ್ತು ಬಲ**

ತರ್ಕದ ಮೂಲಕ ನೋಡಿದಾಗ ಕೊನೆಗೂ ನ್ಯಾಯ ಹುಟ್ಟುತ್ತದೆ ಎನ್ನಬಹುದು. ಆದರೆ ತೀರ್ಪು ನ್ಯಾಯಪರವಾಗಿರಬೇಕಾದರೆ ಎಷ್ಟರ ಮಟ್ಟಿಗಿನ ತರ್ಕವಿರುತ್ತದೋ, ನ್ಯಾಯಸಮ್ಮತವಾಗಲು ಅಷ್ಟೇ ಶಕ್ತಿಯುತವಾಗಿರಬೇಕು. ತರ್ಕ, ನ್ಯಾಯ ಮತ್ತು ಬಲ ತ್ರಿಭುಜದ ಮೂರು ಕೋನಗಳಂತೆ, ಯಾರು ನ್ಯಾಯವನ್ನಳೆಯನು ಬಲ್ಲನೊ ಅವನು ಬಲವನ್ನೂ ಹೊಂದಿರುತ್ತಾನೆ.

**ಇಟ್ಟುಕೊಳ್ಳುವುದು ಮತ್ತು ಕಳೆಯುವುದು**

ಇಟ್ಟುಕೊಳ್ಳುವುದನ್ನು ಕಲಿತವನು ಕಳೆಯುವುದಿಲ್ಲ.

**ದಯೆ**

ನಮ್ಮ ಸಮ ಇರುವವರಿಗಿಂತ ನಮ್ಮ ಕೆಳಗಿರುವವರಿಗೆ ತೋರಿದ ದಯೆಗೆ ಹೆಚ್ಚು ಬೆಲೆಯಿರುತ್ತದೆ.

**ಜ್ಞಾನ**

ನಮ್ಮ ಜ್ಞಾನವನ್ನಳೆಯುವಾಗ ನಾವು ಎಷ್ಟು ತಿಳಿದಿದ್ದೇವೆ ಎನ್ನುವುದಕ್ಕಿಂತ ನಾವು ಎಷ್ಟು ತಿಳಿದಿಲ್ಲ ಎಂದು ಯೋಚಿಸುವುದೊಳಿತು.

**ಜ್ಞಾನ ಮತ್ತು ಜಾಗೃತಿ**

ಜ್ಞಾನವು ಜಾಗೃತಿಯನ್ನು ತರುತ್ತದೆ ಮತ್ತು ಜಾಗೃತಿ ಬಾಳನ್ನು. ನಾವು ಜಾಗೃತಿಯಿಂದಿದ್ದೇವೆ ಎಂದು ಮನಗಂಡ ಕ್ಷಣಗಳು ಮಾತ್ರ ನಮ್ಮ ಬಾಳಿನ ನಿಜವಾಗಿಯೂ ಜಾಗೃತಿಯಿಂದಿದ್ದ ಸಮಯಗಳು; ಹೋಲಿಸಿ ನೋಡಿದಾಗ ಅಂತಹ ಕ್ಷಣಗಳು ಕಡಿಮೆ. ಆದ್ದರಿಂದ ನಮ್ಮ ಬದುಕಿನ ಹೆಚ್ಚು ಭಾಗವನ್ನು ಅರ್ಧ ಸ್ಮೃತಿಯಲ್ಲೇ (ಸಬ್ ಕಾನ್ಷಿಯಸ್) ಕಳೆಯುತ್ತೇವೆ ಎನ್ನುವುದು ಸತ್ಯ.

**ದೀಪ–ಕತ್ತಲೆ**

ದೀಪದ ಬಣ್ಣ ಬಿಳಿಯಿರಬಹುದು, ಆದರೆ ಅದರ ನೆರಳಿನ ಬಣ್ಣವನ್ನೂ ಸಹ ಅದು ಪಸರಿಸುತ್ತದೆ.

**ಭಾಷೆ**

ಇಬ್ಬರು ವ್ಯಕ್ತಿಗಳ ಭಾಷೆಗಳಲ್ಲಿರುವ ವ್ಯತ್ಯಾಸ ಅವರ ಸಾಮರಸ್ಯಕ್ಕೆ ತೊಡಕಾಗುವುದಿಲ್ಲ. ಆದರೆ ಅವರ ರೀತಿ–ನೀತಿಗಳಲ್ಲಿ ಮತ್ತು ಜ್ಞಾನ ಸಂಪಾದನೆಯಲ್ಲಿರುವ ವ್ಯತ್ಯಾಸ ಖಂಡಿತ ತೊಂದರೆಗಳನ್ನು ಒಡ್ಡುತ್ತದೆ.

**ಕಾನೂನು**

ಕಾನೂನು ಕಟ್ಟಳೆಗಳು ಸುಲಭವಾಗಿ ಮಾಡಲ್ಪಡುವಂಥವಾಗಿರಬೇಕು, ಸುಲಭವಾಗಿ ಪಾಲಿಸಬಲ್ಲವಾಗಿರಬೇಕು ಹಾಗೂ ಉಲ್ಲಂಘಿಸಲು ಅತಿ ಕಷ್ಟವಾಗಿರಬೇಕು. ಆಗ ಮಾತ್ರ ಕಾನೂನೊಂದು ವಿವೇಕಯುತವಾಗಿ, ನ್ಯಾಯಯುತವಾಗಿ ಹಾಗೂ ಕಾರ್ಯಶೀಲವಾಗಿರಲು ಸಾಧ್ಯ.

**ನಾಯಕ**

ನಾಯಕ ಸದಾ ಮುಂದಾಳಾಗಿರಬೇಕು ಮತ್ತು ಇನ್ನೊಬ್ಬರ ಹಿಂದೆ ಹೋಗುವವನಾಗಿರಬಾರದೆಂದರೆ, ಬರೀ ಮೆಚ್ಚುಗೆ ಗಳಿಸಿ ತನ್ನ ನಾಯಕತನ ಉಳಿಸಿಕೊಳ್ಳಲು ಬಯಸದೇ ಇರುವವನನ್ನು ನಾಯಕನಾಗಿ ಆರಿಸಬೇಕು. ನಾಯಕನಾಗಿರುವವನಿಗೆ ಇರಬೇಕಾದ ಮುಖ್ಯವಾದ ಅರ್ಹತೆಯೆಂದರೆ ಅವನು ತಾನು ಮುಂದಾಳುವಾಗಿರುವನೋ ಅಥವಾ ಬೇರೆಯವರ ಹಿಂದೆ ಹೋಗುತ್ತಿದ್ದೇನೋ ಎಂದು ಸದಾ ಅರಿತಿರಬೇಕು.



**ಒರಗುವುದು**

ತನಗೇ ನಿಲ್ಲಲು ಶಕ್ತಿಯಿಲ್ಲದ ಕಂಬಕ್ಕೆ ಅಥವಾ ಮನುಷ್ಯನಿಗೆ ಒರಗುವುದು ಮೂರ್ಖತನ. ಏಕೆಂದರೆ, ಅದು ನಮ್ಮ ಪತನವನ್ನು ನಾವೇ ಆಹ್ವಾನಿಸಿದಂತೆ.

**ಕಲಿಯುವಿಕೆ**

ಕಲಿಯುವಿಕೆ ಪಾಂಗಿತವಾದ ಹಬ್ಬದೂಟದಂತೆ: ಅಲ್ಲಿ ಅಜೀರ್ಣಕ್ಕೆ ಅವಕಾಶವಿರಬಾರದು, ಆದರೆ ಹಸಿವು ಹೆಚ್ಚು ಹೆಚ್ಚಾಗುತ್ತಾ ಇರಬೇಕು.

ಕಲಿಯುವುದು ಆಹ್ಲಾದಕರವಾಗಿರಬೇಕು ಮತ್ತು ಅನುಗ್ರಹ ಪಡೆದಂತಿರಬೇಕು.

ಕಲಿಯುವುದಿಲ್ಲ ಎಂಬುದು ಅತಿ ನಿಕೃಷ್ಟ ಹಠಮಾರಿತನ;

ಮರೆತು ಮತ್ತೆ ಕಲಿಯುವುದು ಬೆಟ್ಟ ಹೊರುವ ಕೆಲಸ. ಆದರೆ ಇನ್ನು ಕಲಿಯುವುದಕ್ಕೆ ಏನೂ ಉಳಿದಿಲ್ಲ ಎಂದು ಬಗೆಯುವುದು ನಮಗೆ ನಾವೇ ತಂದುಕೊಳ್ಳುವ ಅತಿ ದೊಡ್ಡ ಶಾಪ.

**ಶಾಸನ**

ರಕ್ಷಣೆಯನ್ನೊದಗಿಸುವುದಕ್ಕೆ ರಕ್ಷಣಾತ್ಮಕ ಎಂದರೆ ಅಪಾಯವನ್ನು ತಂದೊಡ್ಡುವುದಕ್ಕೆ ಅಪಾಯಕಾರಿಯೇ ಸರಿ.

**ಪ್ರಕೃತಿಯ ಪಾಠಗಳು**

ನಾವು ಎಷ್ಟು ಅಪೂರ್ಣರೋ ಪ್ರಕೃತಿ ಅಷ್ಟೇ ಪರಿಪೂರ್ಣವಾದುದು ಆಗಿರುವುದರಿಂದ ಅಲ್ಲಿ ನಡೆಯುವ ಎಲ್ಲ ಸಂಗತಿಗಳಲ್ಲೂ ನೀತಿ ಪಾಠವೊಂದು ಅಡಕವಾಗಿರುತ್ತದೆ. ಹಾಗಾಗಿ ನಮ್ಮ ಕಿವಿಗಳು ಕೇಳುವಂಥವಾಗಿದ್ದರೆ, ಕಣ್ಣುಗಳು ನೋಡುವಂಥವಾಗಿದ್ದರೆ, ಮನಸ್ಸು ಗಮನಿಸುವಂಥದ್ದಾಗಿದ್ದರೆ, ಹಾಗೂ ಹೃದಯ ಭಾವಿಸಲು ಸಾಧ್ಯವಾಗಿದ್ದರೆ ಪ್ರಕೃತಿಯ ಈ ಪಾಠಗಳನ್ನು, ಒಳಸತ್ಯಗಳನ್ನು ನಾವು ಕಲಿಯುತ್ತೇವೆ.

**ಜೀವ**

ಜೀವಕೊಡಲು ನಾವು ಅಶಕ್ತರಾದಲ್ಲಿ, ಜೀವ ತೆಗೆಯಲು ನಮಗೆ ಯಾವ ಹಕ್ಕೂ ಇಲ್ಲ.

**ಇಚ್ಛೆ ಮತ್ತು ಮೆಚ್ಚದಿರುವಿಕೆಗಳು**

ನಮ್ಮ ಇಷ್ಟ–ಕಷ್ಟಗಳನ್ನು ನಿಯಂತ್ರಿಸಲು ಯಾವುದೇ ಕಾನೂನು ಇಲ್ಲದಿರುವುದರಿಂದ, ಇದು ಇಷ್ಟ, ಅದು 'ಸರಿಯಲ್ಲ' ಎಂದು ಹೇಳುವುದು ತಪ್ಪಾಗುತ್ತದೆ. ಆದ್ದರಿಂದ ಇದು ಅದಕ್ಕಿಂತ ಇಷ್ಟ ಎಂದು ಹೇಳುವುದು ಸೂಕ್ತ.

**ಕೊಂಡಿ**

ಸರಪಳಿಯೊಂದು ಗಟ್ಟಿಯಾಗಿರಬೇಕೆಂದರೆ ತನ್ನಲ್ಲಿರುವ ನೂರಾರು ಸಣ್ಣ ಕೊಂಡಿಗಳ ಬಿಗಿ ಅಪ್ಪುಗೆಯ ಮೇಲೆ ಅವಲಂಬಿತವಾಗಿರುತ್ತದೆ. ಅಲ್ಲಿರುವ ಪ್ರತಿ ಕೊಂಡಿಯೂ, ಉಳಿದ ಕೊಂಡಿಗಳ ವಿಷಯ ಏನೇ ಇರಲಿ, ತಮ್ಮ ಪಕ್ಕದ ಕೊಂಡಿಯೊಂದಿಗೆ ಬಾಂಧವ್ಯದಿಂದಿರುತ್ತದೆ. ಪ್ರತಿ ವ್ಯಕ್ತಿಯೂ ಎಲ್ಲೋ ದೂರದಲ್ಲಿರುವವರ ಕುರಿತ ಆಲೋಚನೆಗಳನ್ನು ಬದಿಗಿಟ್ಟು ಪಕ್ಕದವರೊಂದಿಗೆ, ಪಕ್ಕದ ಮನೆಯವರೊಂದಿಗೆ ಒಳ್ಳೆಯ ಬಾಂಧವ್ಯ ಬೆಳೆಸಿಕೊಂಡು, ಉಳಿಸಿಕೊಂಡರೆ ಸಮಾಜ ಎಂಬ ದೊಡ್ಡ ಮಾನವ–ಸರಪಳಿ ಶಕ್ತಿಯುತವಾಗಿರಲು ಸಾಧ್ಯ.

**ಹೆಚ್ಚು–ಕಡಿಮೆ**

ಹೆಚ್ಚು ಕೆಲಸ ಮಾಡುತ್ತೇನೆ ಎನ್ನುವ ಹುಮ್ಮಸ್ಸಿನಲ್ಲಿ ಯಾವುದನ್ನೂ ಸರಿಯಾಗಿ ಮಾಡದಿರುವುದಕ್ಕಿಂತ ಕಡಿಮೆ ಮಾಡಿದರೂ ಸರಿಯಾಗಿ ಮಾಡಿ, ನಮ್ಮ ಕ್ಷಮತೆಯ ಕುರಿತು ವಿಶ್ವಾಸದಿಂದಿರುವುದು ಲೇಸು.

**ತರ್ಕ**

ಇದು ವಿತಂಡವಾದ ಎನಿಸಿದರೂ ಸಹ ನಿಜ: ಬಹುದುಃಖಿಗಳಿಗೆ ತಮಗಿಂತ ಹೆಚ್ಚಿನ ದುಃಖಿಗಳಿದ್ದಾರೆ ಎಂದಾಗ ಮನಸ್ಸಿನ ಭಾರ ಕಡಿಮೆಯಾಗುತ್ತದೆ; ಆದರೆ ಆನಂದದಿಂದಿರುವವನು ತನಗಿಂತ ಹೆಚ್ಚಿನ ಸುಖಿಗಳಿದ್ದಾರೆ ಎಂದು ಅರಿತಾಗ ಕೊಂಚ ದುಃಖಕ್ಕೊಳಗಾಗುತ್ತಾನೆ.

**ಏಕಾಂಗಿತನ**

ಏಕಾಂಗಿತನ ಮನಸ್ಸಿನ ಅವಸ್ಥೆಗಳಲ್ಲೊಂದು. ದೊಡ್ಡ ಪಟ್ಟಣದಲ್ಲಿ ನಾವು ಸುಲಭವಾಗಿ ಏಕಾಂಗಿತನ ಅನುಭವಿಸುತ್ತೇವೆ. ಆದರೆ ಹಳ್ಳಿಯೊಂದರಲ್ಲಿ ಇದು ಸಾಧ್ಯವಿಲ್ಲ. ಯಾವುದೇ ವಿಷಯದಲ್ಲಿ ಆಸಕ್ತಿ ಬೆಳೆಸಿಕೊಳ್ಳದೆ, ಮನಸ್ಸು



ಯಾವುದೇ ಕೆಲಸವಿಲ್ಲದೆ ಏಕಾಂಗಿಯಾಗುತ್ತದೆ. ಆಸಕ್ತಿ ಬೆಳೆಸಿಕೊಳ್ಳಲು ನಮ್ಮದೇ ಆತ್ಮಕ್ಕಿಂತ ದೊಡ್ಡ ಸ್ನೇಹಿತ ಮತ್ತೊಬ್ಬನಿಲ್ಲ; ಏಕೆಂದರೆ ಆತ್ಮ ನಮ್ಮನ್ನು ಎಂದೂ ತ್ಯಜಿಸುವುದಿಲ್ಲ. ನಾವೇ ಎಷ್ಟೋ ಬಾರಿ ಅದರಿಂದ ದೂರ ಸರಿದಿರುತ್ತೇವೆ.

**ಪ್ರೀತಿ ಮತ್ತು ಮೋಹ**

ಎರಡು ನೀರಿನ ಹನಿಗಳು ಪರಸ್ಪರ ಹತ್ತಿರವಾಗುತ್ತಿದ್ದರೆ ಸೇರಿಹೋಗುತ್ತವೆ– ಅದು ಪ್ರೀತಿ. ಅಂಟಿಸಿದ ಹಾಳೆಯೊಂದು ಅಂಟಿನ ಶಕ್ತಿ ಕಡಿಮೆಯಾದ ಕೂಡಲೇ ಉದುರಿಬೀಳುತ್ತದೆ– ಅದು ಮೋಹ.

**ಅದೃಷ್ಟ**

ನಾವು ಅಂದುಕೊಂಡ ಎಷ್ಟೋ ವಿಷಯಗಳು ನಡೆಯುವುದಿಲ್ಲ. ನಾವು ಎದುರುನೋಡದ, ಊಹಿಸಿರದ ಎಷ್ಟೋ ವಿಷಯಗಳು ಜರುಗುತ್ತವೆ. ಇದೆಲ್ಲಕ್ಕೂ ಅದೃಷ್ಟ(ನತದೃಷ್ಟ)ವೇ ಕಾರಣ ಎನ್ನುವುದಾದರೆ ಮತ್ತು ಕಾರಣವಿಲ್ಲದೆ ಏನೂ ಜರುಗುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುವುದಾದರೆ, ಅದೃಷ್ಟದ ಕಾರಣ ಅಥವಾ ಮೂಲ ಯಾವುದು?

**ಮನುಷ್ಯನ ಶ್ರೇಷ್ಠ ಸಾಧನೆ**

ದೇವರ ಸಂಕಲ್ಪವನ್ನು ಅರ್ಥ ಮಾಡಿಕೊಂಡು ಸ್ವಾಗತಿಸುವುದೇ ಮನುಷ್ಯನ ಅತಿ ಶ್ರೇಷ್ಠ ಸಾಧನೆ.

**ಮಂತ್ರ**

ದೇಹಕ್ಕೆ ಔಷಧಿ ಹೇಗೋ, ಹಾಗೆ ಮನಸ್ಸಿಗೆ ಮಂತ್ರ.

**ಭೌತಿಕವಾದ**

ವಸ್ತುಕೇಂದ್ರಿತ ವಾದದ ಸೆಳೆತ ನಮ್ಮನ್ನು ಎಷ್ಟು ಮೂಢರನ್ನಾಗಿಸಿದೆ ಎಂದರೆ ಬೇರೆಲ್ಲವನ್ನು ನಿಕೃಷ್ಟ ಎಂದು ಬಗೆಯುವಂತೆ ಮಾಡಿದೆ. ಹೀಗಾಗಿ ಎಲ್ಲರಲ್ಲೂ, ಎಲ್ಲದರಲ್ಲೂ ಮಿಳಿತಗೊಂಡಿರುವ ಕೆಲವು ಮೌಲ್ಯಗಳನ್ನು ಗುರುತಿಸುವ ಹಾಗೂ ಗೌರವಿಸುವ ನಮ್ಮ ಸಾಮರ್ಥ್ಯ ಮುರುಟಿಹೋಗಿದೆ. ಪೀಠೋಪಕರಣಗಳನ್ನು ನೋಡಿದರೆ ಅವನ್ನು ಕುರ್ಚಿ, ಮೇಜು ಎಂದು ಗುರುತಿಸುತ್ತೇವೆಯೇ ಹೊರತು ಮರವೆಂದಲ್ಲ. ಹೊಳೆಯುವ ಸರ, ಬಳೆಗಳನ್ನು ನೋಡಿದರೆ ಆಭರಣಗಳು

ಎನ್ನುತ್ತೇವೆಯೇ ಹೊರತು ಚಿನ್ನ ಎಂದಲ್ಲ ಮತ್ತು ಮನುಷ್ಯನನ್ನು ನೋಡಿದಾಗ ಗಂಡು, ಹೆಣ್ಣು ಎಂದು ಗುರುತಿಸುತ್ತೇವೆಯೇ ಹೊರತು ಸೃಷ್ಟಿಯ ಅತ್ಯದ್ಭುತ ರಚನೆ ಎಂದಲ್ಲ.

**ಮಾಧ್ಯಮಗಳು**

ನಮ್ಮ ದೇಹ, ಮನಸ್ಸು ಮತ್ತು ಆತ್ಮಗಳು ಎಂದೂ ನಮ್ಮವಲ್ಲ ಎಂಬ ಅರಿವು ನಮ್ಮನ್ನು ವಿನೀತರನ್ನಾಗಿ ಮಾಡುತ್ತದೆ. ಏಕೆಂದರೆ, ಒಂದು ವಸ್ತುವನ್ನು ಹೊಂದಲು ಶ್ರಮಪಡಬೇಕು. ಅದನ್ನು ಕೊಂಡಿರಬೇಕು ಅಥವಾ ಆ ವಸ್ತುವಿನ ಮೇಲೆ ನಮ್ಮ ಹಕ್ಕಿರಬೇಕು. ಹಾಗಾಗಿ ನಾವು ಎಂಬ ನಾವೇ ಎಂದಿಗೂ ನಮ್ಮವರಲ್ಲ. ಹೇಗೆ ಮರ, ಹತ್ತಿ ಮತ್ತು ಭೂಮಿ ತಾವು ಕೊಟ್ಟ ಹಣ್ಣು, ಬಟ್ಟೆ ಮತ್ತು ಬೆಳೆ ತಮ್ಮವು ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲವೋ ಹಾಗೆ ನಾವು ಕೂಡ ನಾವು ಜನ್ಮ ಕೊಟ್ಟವರನ್ನೂ ನಮ್ಮವರೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ನಾವೆಲ್ಲ ಕೇವಲ ಮಾಧ್ಯಮಗಳಷ್ಟೆ.

**ಜ್ಞಾಪಕ ಶಕ್ತಿ**

ನಮ್ಮ ಜ್ಞಾಪಕ ಶಕ್ತಿ ಕಡಿಮೆ ಎಂದು ಬಯ್ದುಕೊಳ್ಳುತ್ತೇವೆ. ಆದರೆ, ಹೆಚ್ಚಾದ ನೀರು ಹರಿದುಹೋಗಲು ದಾರಿ ಮಾಡದಿದ್ದರೆ ನಿಂತ ನೀರು ಭೂಮಿಯ ಫಲವತ್ತತೆಯನ್ನು ಹಾಳು ಮಾಡುವಂತೆ ನಮ್ಮ ಮೆದುಳೂ ಸಹ ಆಗಾಗ ಮರೆತು ಹೋಗದಿದ್ದರೆ ಹಳೆ ವಿಷಯಗಳು ಅದರ ಜ್ಞಾನ ಫಲವತ್ತತೆಯನ್ನು ಹಾಳುಗೆಡವುತ್ತವೆ ಎಂಬುದನ್ನು ಅರಿತು ಸಮಾಧಾನ ಪಡಬಹುದು.

**ಮನಸ್ಸು**

ಪ್ರತಿ ಕ್ರಿಯೆಯೂ ವಿಚಾರದ ಅಥವಾ ಮಾತಿನ ಪರಿಣಾಮ, ಪ್ರತಿ ಮಾತೂ ವಿಚಾರದ ಪರಿಣಾಮ– ಹಾಗೆ ನೋಡಿದರೆ ನಮ್ಮ ಇಡೀ ಬದುಕು ನಮ್ಮ ಯೋಚನೆಗಳ ಪರಿಣಾಮ ಮೊತ್ತವಷ್ಟೆ. ಮನಸ್ಸು ಎಲ್ಲಕ್ಕೂ ಮೂಲ.

**ಪವಾಡ**

ಘಟನೆಯೊಂದರ ಮೂಲವನ್ನು ತಿಳಿಯಲು ಅಶಕ್ತರಾಗಿ ಅದನ್ನು ಪವಾಡ ಎನ್ನುತ್ತೇವೆ. ಆದರೆ ಪ್ರತಿ ಘಟನೆಗೂ ಮೂಲಕಾರಣವಿದೆ ಎಂಬುದನ್ನು ಒಪ್ಪುವುದಾದರೆ ಪವಾಡ ಎಂಬುದಕ್ಕೆ ಅರ್ಥವೇ ಇಲ್ಲ.



**ದುಃಖ**

ಸಂತಸ ಕ್ಷಣಗಳು ಒಳ್ಳೆಯ ಬುದ್ಧಿ ಮತ್ತು ಹೃದಯದ ಫಲ, ದಾನವೂ ಮನಸ್ಸಿನ ದಾನಶೂರತೆಯ ಫಲ. ಆದರೆ ದುಃಖ ಮಾತ್ರ ಬುದ್ಧಿಯಲ್ಲಿ, ಹೃದಯದಲ್ಲಿರುವ ಜಿಪುಣತನದ ಫಲ.

**ದುರದೃಷ್ಟ**

ನಾವು ಎಷ್ಟು ಅದೃಷ್ಟವಂತರು ಎಂದು ತಿಳಿಸಲು ದೇವರು ಹಲವು ದುರದೃಷ್ಟಗಳನ್ನು ಒಡ್ಡಿ ತೋರಿಸುತ್ತಾನೆ.

**ಧ್ಯೇಯ**

ಪ್ರಪಂಚವು ಶ್ರೇಷ್ಠ ಧ್ಯೇಯದ ಹೆಸರಲ್ಲಿ ಕೆಲಸ ಮಾಡುವ ಧರ್ಮಪ್ರಚಾರ ಮಂಡಳಿಗಳನ್ನು ಹಲವು ಬಾರಿ ಅನುಮಾನಿಸುತ್ತದೆ. ಈ ಪೃಥ್ವಿಯ ಮೇಲಿರುವ ಪ್ರತಿಯೊಬ್ಬನಿಗೂ ಧ್ಯೇಯವೊಂದಿರುತ್ತದೆ. ಹೇಗೆ ಸಣ್ಣ ನಾಣ್ಯವೊಂದು ತನ್ನ ಕಾರ್ಯವನ್ನು ಮಾಡಿಯೇ ತೀರುತ್ತದೋ ಹಾಗೆ ಮನುಷ್ಯನೂ ಕೂಡ ತನ್ನ ಧ್ಯೇಯವನ್ನು ಸಾಧಿಸಲೇಬೇಕು ಎಂದು ತಿಳಿದರೆ ಆ ಅನುಮಾನ ಕೊಂಚ ಕಡಿಮೆಯಾದೀತೇನೋ. ಐವತ್ತು ಪೈಸೆಯ ನಾಣ್ಯಗಳು ಲಕ್ಷದಷ್ಟಿದ್ದರೂ ಅವನ್ನು ಗಮನಿಸಲು ಯಾರೂ ಇರುವುದಿಲ್ಲ. ಆದರೆ ಸಾವಿರ ರೂಪಾಯಿಯ ಒಂದು ನೋಟು ಎಲ್ಲರ ಗಮನ ಸೆಳೆಯುತ್ತದೆ. ಕೋಟಿಗೊಬ್ಬ ಅಂಥ ಮನುಷ್ಯ ಜನಿಸುತ್ತಾನೆ; ನಾವು ಆತನನ್ನು ಅವತಾರ ಪುರುಷ ಎಂದರೂ ಆತನೇನು ದೇವರಲ್ಲ; ಸಾವಿರ ಜನರ ಧ್ಯೇಯಗಳನ್ನು ಪೂರೈಸಬಲ್ಲ ಮನಸ್ಸಿನವನಾಗಿರುತ್ತಾನೆ ಅಷ್ಟೆ. ಆತ ಈ ಪ್ರಪಂಚಕ್ಕೆ ಕಾಲಿಟ್ಟ ಮೇಲೆ ತನ್ನ ಧ್ಯೇಯವನ್ನು ಪೂರೈಸುವ ಹಠದಲ್ಲಿರುತ್ತಾನೆ. ಅದೇ ಅವನನ್ನು ಶ್ರೇಷ್ಠವನ್ನಾಗಿಸುತ್ತದೆ.

**ಕೆಲಸದ ಹುಮ್ಮಸ್ಸು**

ನಮ್ಮ ಅಲಂಕಾರವನ್ನು, ಸ್ವಾರ್ಥವನ್ನು ಹೊಡೆದೋಡಿಸಿದ ದಿನ ಸಮಾಜಸೇವೆ ಮಾಡಲು ನಾವು ಉತ್ಸುಕರಾಗುತ್ತೇವೆ. ನಿಜವಾದ ಅಹಂಭಾವವು ದರ್ಪವಿಲ್ಲದೆ ಭೂಮಂಡಲದ ಮೂಲೆಯಲ್ಲಿರುವ ಎಲ್ಲರೂ ತನ್ನವರೇ ಎಂದು ಸೇವೆಗೆ ನಿಲ್ಲಲು ಪ್ರೇರೇಪಿಸುತ್ತದೆ.

**ತಪ್ಪು**

ಮಾಡುವವರೆಗೂ ಅರಿವಾಗದ, ಮಾಡಿದ ಮೇಲೆ ಗೊತ್ತಾಗುವ ಸತ್ಯವೆಂದರೆ ತಪ್ಪೊಂದೆ.

**ಹಣ**

ಹಣ ಎಷ್ಟರ ಮಟ್ಟಿಗೆ ಮುಖ್ಯಸ್ಥಾನವನ್ನು ಪಡೆದಿದೆ ಎಂದರೆ ಅದಿಲ್ಲದಿದ್ದರೆ ಈ ಪ್ರಪಂಚದಲ್ಲಿ ಬಡವರೇ ಇರುತ್ತಿರಲಿಲ್ಲ ಎಂಬುದನ್ನೂ ಸಹ ನಾವು ಮರೆತಿದ್ದೇವೆ.

**ನೈತಿಕತೆ**

ನಮ್ಮ ನಿಲುವುಗಳಿಗೆ ನೈತಿಕತೆ ಎಂಬ ಅಡಿಗಲ್ಲು ಭದ್ರ ಬುನಾದಿಯಾಗಿ ಕೆಲಸ ಮಾಡುತ್ತದೆ. ಕಡು ಕಷ್ಟಗಳ ಬಿರುಗಾಳಿಯ ವಿರುದ್ಧವೂ ನಾವು ಗಟ್ಟಿಯಾಗಿ ನಿಲ್ಲುವಂತೆ ಅದು ಕಾಪಾಡುತ್ತದಷ್ಟೇ ಅಲ್ಲದೆ, ನಾವು ದಾರಿ ತಪ್ಪದಂತೆ ನಮ್ಮನ್ನು ಹಿಡಿದಿಡುತ್ತದೆ. ಒಳ್ಳೆಯ ಪಾದರಕ್ಷೆಗಳು ಧೂಳು, ಮಣ್ಣು ಮತ್ತು ಹೊಲಸಿನಿಂದ ಹೇಗೆ ನಮ್ಮನ್ನು ರಕ್ಷಿಸುವುದೋ ಹಾಗೆ ನೈತಿಕತೆ ಸಹ.

**ಪ್ರೇರಣೆಗಳು**

ಅವಸರದಲ್ಲಿ ಹೊರಟಿರುವ ವ್ಯಕ್ತಿಯೊಬ್ಬನ ಕಾರಣ ಏನೇ ಇರಲಿ, ನೋಡಿದ ಜನ ಹಲವು ರೀತಿ ಯೋಚಿಸುತ್ತಾರೆ. ಕೆಲಸಕ್ಕೆ ತಡವಾಗಬಾರದೆಂದು, ತರಕಾರಿ ಬರಿದಾಗುವ ಮುನ್ನ ಸಂತೆಗೆ ತಲುಪಬೇಕೇನೋ, ಬಸ್ಸು ಹಿಡಿಯಲು– ಹೀಗೆ ನೂರು ರೀತಿ ಯೋಚಿಸುವ ಜನ ತಮ್ಮದೇ ಯೋಚನೆಗಳನ್ನು ಆತನ ಕಾರ್ಯದ ಮೇಲೆ ಹೊರಿಸುತ್ತಾರೆ. ಪೂರ್ವಾಗ್ರಹ ಪೀಡಿತರಾಗಿರದಿದ್ದರೆ ಹೀಗೆಯೇ, ನಮ್ಮ ಅಭಿಪ್ರಾಯಗಳನ್ನು ಏನೂ ಅರಿಯದ ಇನ್ನೊಬ್ಬರ ಮೇಲೆ ಹೇರುತ್ತಿರುತ್ತೇವೆ.

**ಜೇಡಿಮಣ್ಣು**

ಒಂದೇ ಜೇಡಿಮಣ್ಣಿನಲ್ಲಿ ಹೇಗೆ ಸುಂದರ ಮತ್ತು ಕುರೂಪ ವಿಗ್ರಹಗಳನ್ನು ಮಾಡಬಹುದೋ, ಒಂದು ಮನಸ್ಸನ್ನು ಒಳ್ಳೆಯ ಅಥವಾ ಕೆಟ್ಟದನ್ನಾಗಿ ಮಾಡಬಹುದು.

**ಗುಡ್ಡ**

ಗುಡ್ಡವೊಂದು ಯಾವಾಗಲೂ ಗುಡ್ಡವಾಗೇ ಇರುತ್ತದೆ. ಆದರೆ ಬೇರೆ ಬೇರೆ ಸ್ಥಳಗಳಲ್ಲಿ ನಿಂತು ನೋಡಿದಾಗ ಬೇರೆ ಬೇರೆ ರೀತಿಯಲ್ಲಿ ಕಾಣುತ್ತದೆ.



ದೊಡ್ಡ ಮನುಷ್ಯರೂ ಹಾಗೆಯೇ; ತಮ್ಮ ತಮ್ಮ ಸ್ಥಾನದಲ್ಲಿ ನಿಂತು ನೋಡಿದ ಇತರರಿಗೆ ಬೇರೆ ಬೇರೆ ರೀತಿಯಲ್ಲಿ ಕಂಡರೂ ತಾವು ಮಾತ್ರ ದೊಡ್ಡವರಾಗಿಯೇ ಉಳಿದಿರುತ್ತಾರೆ.

**ಸಂಗೀತ**

ಅದು ಹೃದಯದ ಭಾಷೆ; ಭಾವನೆಗಳು ಮಾತ್ರ ಆ ಭಾಷೆಯ ವಿಷಯಗಳು.

**ಪ್ರಕೃತಿ**

ಪೂರ್ವಕ್ಕೆ ರಾತ್ರಿ ಪಶ್ಚಿಮಕ್ಕೆ ಬೆಳಗು; ಉತ್ತರಾರ್ಧದಲ್ಲಿ ಛಳಿ, ದಕ್ಷಿಣಾರ್ಧದಲ್ಲಿ ಬೇಸಿಗೆ. ಪ್ರಕೃತಿ ತನ್ನ ತಕ್ಕಡಿಯಲ್ಲಿ ಭೂಮಿಯನ್ನು ಸಮವಾಗಿ ತೂಗುತ್ತದೆ.

**ಅವಶ್ಯಕತೆ ಮತ್ತು ದುರಾಸೆ**

ದುರಾಸೆ ಇರುವವನು ಒಂದು ವಸ್ತು ಹೊಂದಲು ಕಾರಣ ಹುಡುಕುತ್ತಾನೆ. ಅವಶ್ಯಕತೆಯಿದ್ದವನಿಗೆ ಆ ನಾಟಕದ ಅವಶ್ಯಕತೆಯಿಲ್ಲ.

**ಘಟನೆಗಳು**

ಕಾರ್ಯಕಾರಿಣೀ ತತ್ವ ಹಾಗೂ ಕ್ರಿಯೆ–ಪ್ರಕ್ರಿಯೆಗಳ ಸಂಬಂಧಗಳನ್ನು ಒಪ್ಪುವುದಾದರೆ, ಈ ಘಟನೆಗಳು ನಮಗೋಸ್ಕರ ಜರುಗುತ್ತವೆ ಎಂಬುದನ್ನು ಹೇಗೆ ಒಪ್ಪುತ್ತೇವೋ ನಾವು ಘಟನೆಗಳಿಗೋಸ್ಕರ ಘಟಿಸುತ್ತೇವೆ ಎಂಬುದನ್ನೂ ಒಪ್ಪಬೇಕು.

**ಅಭಿಪ್ರಾಯ**

ಜನರ ಬೇಡಿಕೆ ಪೂರೈಸಲು ಕೃತ್ರಿಮ ತಂತ್ರಗಳನ್ನುಪಯೋಗಿಸಿ ಹಲವು ವಸ್ತುಗಳನ್ನು ತಯಾರಿಸುತ್ತೇವೆ. ಎಲ್ಲಿಯವರೆಗೂ ಅಭಿಪ್ರಾಯಗಳು ಹಾಗೆ ಮಾಡಲ್ಪಡುವುದಿಲ್ಲವೋ ಅಲ್ಲಿಯವರೆಗೂ ಯಾವುದೇ ತೊಂದರೆಯಿಲ್ಲ.

**ಇತ್ಯಾತ್ಮಕ ಮತ್ತು ನೇತ್ಯಾತ್ಮಕ**

ಇತ್ಯಾತ್ಮಕತೆ ಬೆಳೆಯುವಂಥ ವಾತಾವರಣವನ್ನು ಕಲ್ಪಿಸುವುದು ಅಸಾಧ್ಯ. ನೇತ್ಯಾತ್ಮಕ ಸ್ವಭಾವಕ್ಕೆ ಶರಣಾದವನನ್ನು ಇತ್ಯಾತ್ಮಕಕ್ಕೆ ಎಳೆದು ತರುವುದು ಯಾವಾಗಲೂ ತಡವಾಗಿ ಬರುವವನಿಗೆ ಸಮಯಕ್ಕೆ ಸರಿಯಾಗಿ ಬರಲು ಅಪ್ಪಣೆ ಮಾಡಿದಂತೆ.

**ಬೇರೆಯವರು**

ನಾವು ಹೇಗೆ ಕೆಲವರನ್ನು ಬೇರೆಯವರು, ಹೊರಗಿನವರು ಎಂದು ನೋಡುತ್ತೇವೋ, ಹಲವರು ನಮ್ಮನ್ನು ಹಾಗೆ ನೋಡುತ್ತಾರೆ ಎಂಬುದು ಸತ್ಯ.

**ನಮ್ಮ ಹಕ್ಕು**

ಕೆಲಸ ಮಾಡುವುದು ನಮ್ಮ ಹಕ್ಕು, ಕಷ್ಟಪಟ್ಟು ಕೆಲಸ ಮಾಡುವುದೂ ಕೂಡ. ಆದರೆ ಫಲಿತಾಂಶಗಳನ್ನು ನಿರೀಕ್ಷಿಸಿ ಕೂಡುವುದು ನಮ್ಮ ಹಕ್ಕಲ್ಲ. ಫಲಿತಾಂಶವೊಂದಕ್ಕೋಸ್ಕರ ಕೆಲಸ ಮಾಡುವುದು ನಿರ್ದಿಷ್ಟ ಫಲವೊಂದಕ್ಕೆ ಕೆಲಸ ಮಾಡಿದಂತೆ. ಆಗ ಇಂಧನ ನಿರೀಕ್ಷಿಸಿ ಕೆಲಸ ಮಾಡುವ ಯಂತ್ರಕ್ಕೂ, ನಮಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಕೆಲಸವನ್ನು ಕೆಲಸಕ್ಕೋಸ್ಕರವೇ ಮಾಡುವುದನ್ನು ಕಲಿಯಬೇಕು. ಇಲ್ಲದಿದ್ದರೆ ಕೆಲಸದ ಗುಣಮಟ್ಟ ಅಷ್ಟೇ ಇಲ್ಲ, ನಮ್ಮ ಆತ್ಮಸಾಕ್ಷಿಯೂ ಭ್ರಷ್ಟವಾಗಲು ದಾರಿಮಾಡಿಕೊಟ್ಟಂತೆ.

**ನಮ್ಮದು**

ನಮ್ಮ ಅರ್ಹತೆಗೆ ತಕ್ಕಂತೆ ಪಡೆಯುತ್ತೇವೆ ಎಂಬ ಮಾತು ನಿಜ. ಅಷ್ಟೇ ನಿಜವಾದ ಮಾತೆಂದರೆ ನಾವೇನು ಕೊಡುತ್ತೇವೋ ಅದು ನಮ್ಮ ಅರ್ಹತೆಯನ್ನು ನಿಗದಿ ಮಾಡುತ್ತದೆ ಎಂಬುದು. ಹಾಗಾಗಿ ನಮ್ಮದು ಎಂಬುದು ಬೇರೇನಲ್ಲ. ನಾವೇನು ಕೊಟ್ಟಿರುತ್ತೇವೋ ಅದೇ. ಇಂದು ಇರುವುದು ನಾಳೆ ಇರುವುದಿಲ್ಲವಾದ್ದರಿಂದ ನಾವು ಕೊಡುವುದೇ ನಮ್ಮದು ಎನ್ನುವುದು ನಿಜವಾದ ಮಾತು.

**ಹೊರನೋಟ**

ನಮ್ಮ ಹೊರನೋಟ ದೊಡ್ಡದಿದ್ದಷ್ಟೂ ನಮ್ಮ ಅಹಂ ಚಿಕ್ಕದಿರುತ್ತದೆ.

**ಮೇಲ್ವಿಚಾರಕ**

ಈ ಪ್ರಪಂಚದಲ್ಲಿ ಮೇಲ್ವಿಚಾರಕರಿಗೆ ಕೊರತೆಯಿಲ್ಲ; ಅದರೆ ನಮಗೆ ಬೇಕಾಗಿರುವುದು ಕ್ಷಮತೆ ಮರೆತು ಕೆಳಸ್ತರದಲ್ಲಿ ಕೆಲಸ ಮಾಡುವವರು.

**ನೋವು ಮತ್ತು ಮುಗ್ಧತೆ**

ನೋವು ನರಳಿದವನಿಗಷ್ಟೇ ಗೊತ್ತು; ಮುಗ್ಧತೆ ಮುಗ್ಧನೊಬ್ಬನ ಕುರಿತು ಕಣ್ಣೀರು ಸುರಿಸಿದವನಿಗೇ ಗೊತ್ತು.



**ದೇಶಾಭಿಮಾನ**

ಸ್ವಾರ್ಥವು ಕಡಿಮೆಯಾದಷ್ಟೂ ದೇಶಾಭಿಮಾನ ಹೆಚ್ಚಾಗುತ್ತದೆ.

**ದೃಷ್ಟಿ ಮನೋಭಾವ**

ನೀರು ತುಂಬಿದ ಗಾಜಿನ ಕೊಳವೆಯ ಮೂಲಕ ನೋಡಿದ ವಸ್ತುಗಳು ಓರೆ–ಕೋರೆಯಾಗಿ, ದೊಡ್ಡದಾಗಿ ಕಾಣುತ್ತವೆ. ಅಂದರೆ, ಸತ್ಯವನ್ನು ಅವು ಮರೆಮಾಚುತ್ತವೆ ಅಥವಾ ಮಸುಕಾಗಿಸುತ್ತವೆ. ಒಂದು ನಿರ್ದಿಷ್ಟ ಮನೋಭಾವದಿಂದ ಎಲ್ಲವನ್ನೂ, ಎಲ್ಲರನ್ನೂ ನೋಡಿದರೆ ಆಗುವುದೂ ಸಹ ಇದೇ. ವೈಯಕ್ತಿಕ ಸಾಂಸಾರಿಕ ನೆಲೆಗಟ್ಟಿನಿಂದ ಸಮಾಜವನ್ನು ನೋಡುವುದು ಅಥವಾ ರಾಷ್ಟ್ರೀಯ ನೆಲೆಗಟ್ಟಿನಿಂದ ಸಮಾಜವನ್ನು ನೊಡುವುದು ಅಥವಾ ರಾಷ್ಟ್ರೀಯ ನೆಲೆಗಟ್ಟಿನಿಂದ ಅಂತಾರಾಷ್ಟ್ರೀಯ ವಿಷಯಗಳನ್ನು ನೋಡುವುದು ಗೊಂದಲಗಳಿಗೆ ಕಾರಣವಾಗುತ್ತದೆ. ನಮ್ಮ ದೃಷ್ಟಿ ಮನೋಭಾವದಿಂದ ಎಲ್ಲರನ್ನೂ ಅಳೆಯಲು ಹೋದಾಗ ಯಡವಟ್ಟುಗಳು ಸಂಭವಿಸುವುದೇ ಹೆಚ್ಚು.

**ಸ್ಥಳ**

ಹತ್ತಿಗಿಡ ತುಂಬ ಬೆಲೆಯುಳ್ಳದ್ದಾಗಿರಬಹುದು, ಆದರೆ ಭತ್ತ ತುಂಬಿದ ಗದ್ದೆಯಲ್ಲಿ ಅದನ್ನು ಕಳೆಯೆಂದು ಪರಿಗಣಿಸಿ ಕಿತ್ತು ಹಾಕುತ್ತಾರೆ. ಗೊಬ್ಬರ ಗಿಡಗಳ ಬೆಳವಣಿಗೆಗೆ ಪ್ರಮುಖವಾದುದು. ಆದರೆ ಗಿಡದ ಪಾತಿಗೆ ಬದಲು ಅದನ್ನು ಮನೆಯಲ್ಲಿ ಚೆಲ್ಲಿದರೆ ಕಸ ಎಂದು ಬಗೆದು ಗುಡಿಸಿ ತಿಪ್ಪೆಗೆ ಹಾಕುತ್ತಾರೆ.

ಅತಿ ರುಚಿಯಾದ ತಿಂಡಿಯೂ ಸಹ ವಾಯುನಾಳಕ್ಕೆ ಅಡ್ಡಿಯಾದರೆ ಅದರಿಂದ ತೊಂದರೆಯೇ ಸರಿ.

ಎಲ್ಲವೂ ತಮ್ಮ ನಿರ್ದಿಷ್ಟ ಸ್ಥಳದಲ್ಲಿ ಬೆಲೆಯುಳ್ಳದ್ದೂ, ಪ್ರಮುಖವಾದುದೂ ಆಗಿರುತ್ತದೆ. ಈ ಪಟ್ಟಿಗೆ ಮನುಷ್ಯನೂ ಸೇರುತ್ತಾನೆ.

**ಯೋಜನೆಗಳು**

ದೇಶದ ದೂರದೃಷ್ಟಿ ಯೋಜನೆಗಳನ್ನು ಗಗನಚುಂಬಿ ಕಟ್ಟಡವೊಂದರ ನಿರ್ಮಾಣಕ್ಕೆ ಹೋಲಿಸಬಹುದು. ಪ್ರತಿ ಮಹಡಿಯೂ ತನ್ನ ಮೇಲಿರುವ ಮಹಡಿಯನ್ನು ಹೊರುವಷ್ಟು ಭದ್ರವಾಗಿರಬೇಕು.

**ಸಭ್ಯತೆ**

ಏನೂ ಅರಿಯದವನ ತಡೆಯಿಲ್ಲದ ಅಸಭ್ಯತೆ ಎಲ್ಲವನ್ನೂ ಅರಿತವನು ಉಪಾಯದಿಂದ ತೋರುವ ಅತಿವಿನಯತೆ, ನಾಜೂಕುಗಳಿಗಿಂತ ಉತ್ತಮ.

**ರಾಜಕಾರಣಿ, ರಾಯಭಾರಿ ಮತ್ತು ಮುತ್ಸದ್ದಿ**

ರಾಜಕಾರಣಿಗಳು ನೂರರಷ್ಟಿದ್ದರೆ, ರಾಯಭಾರಿಗಳು ಅದಕ್ಕಿಂತ ಕಡಿಮೆ; ಮುತ್ಸದ್ದಿಗಳು ಮಾತ್ರ ಎಲ್ಲೋ ಬೆರಳೆಣಿಕೆಯಷ್ಟು ಸಿಗುತ್ತಾರೆ.

**ಜನಪ್ರಿಯತೆ**

ಜನಪ್ರಿಯತೆ ಅತ್ಯಮೌಲ್ಯವಾದುದು; ಆದರೆ ಕೀಳು ಮಟ್ಟಕ್ಕಿಳಿದಾಗ ಅದು ತನ್ನ ಎಲ್ಲ ಬೆಲೆಯನ್ನು ಕಳೆದುಕೊಳ್ಳುತ್ತದೆ.

**ಆಸ್ತಿ**

ಆಸ್ತಿಯು ಎಲ್ಲಿಯವರೆಗೂ ಹೊರೆಯಾಗುವುದಿಲ್ಲವೂ ಅಲ್ಲಿಯವರೆಗೂ ಆನಂದಕ್ಕೆ ಕಾರಣವಾಗಿರುತ್ತದೆ.

**ಬಡತನ**

ಬಡತನ ಹಲವು ಬಾರಿ ಮನುಷ್ಯನನ್ನು ಸಿರಿತನದ ಹುಚ್ಚುಗಳಿಂದ ಕಾಪಾಡುತ್ತದೆ.

**ಅಧಿಕಾರ ಮತ್ತು ಶಕ್ತಿ**

ಅಧಿಕಾರದ ಶಕ್ತಿ ಮರವೊಂದಕ್ಕೆ ದೇವರು ಕೊಟ್ಟ ಶಕ್ತಿಯಂತೆ. ಮರವು ತಾನು ಬೆಳೆಯಬೇಕೆಂಬ ಹಂಬಲವಿದ್ದರೂ, ದಣಿದು ಬಂದ ಯಾತ್ರಿಕರಿಗೆ ಇತರ ಸಹಾಯಗಳೊಡನೆ ತಂಪಾದ ನೆರಳನ್ನು ನೀಡುವುದು ತನ್ನ ಕರ್ತವ್ಯ ಮತ್ತು ಜವಾಬ್ದಾರಿ ಎಂಬುದನ್ನು ಎಂದೂ ಮರೆಯುವುದಿಲ್ಲ.

**ಪ್ರಾರ್ಥನೆ**

ದೇವರು ನಮಗೆ ಕೊಟ್ಟಿರುವ ನೈತಿಕ, ಆರ್ಥಿಕ ಮತ್ತು ಆಧ್ಯಾತ್ಮಿಕ ಅಂಶಗಳ ಮೇಲೆಯೇ ನಮ್ಮ ಇಡೀ ಜೀವನ, ಜೀವ ನಿಂತಿರುವುದು ಎಂದು ಅರಿತು ಬದುಕುವುದಕ್ಕಿಂತ ದೊಡ್ಡ ಪ್ರಾರ್ಥನೆ ಬಹುಶಃ ಮತ್ತೊಂದಿಲ್ಲ. ಅಂತಹ ಪ್ರಾರ್ಥನೆಗೆ



ಪೂಜೆ–ಪುನಸ್ಕಾರಗಳೆಂಬ ಆಡಂಬರಗಳ ಅವಶ್ಯಕತೆಯಿರುವುದಿಲ್ಲ.

ದೇವರು ಸರ್ವಜ್ಞಾನಿ ಹಾಗೂ ಕರುಣಾಮಯಿ ಎಂದು ಅರಿತವನು ಯಾವುದೇ ವರವನ್ನು ಬೇಡುವುದಿಲ್ಲ.

**ವರ್ತಮಾನ ಮತ್ತು ಭೂತ**

ವರ್ತಮಾನ ಎನ್ನುವುದು ಕೇವಲ ಭೂತಕಾಲದ ಫಲವಾಗಿ ಉಂಟಾದದ್ದು.

**ಆದ್ಯತೆ**

ಆದ್ಯತೆ ಮೊದಮೊದಲಿಗೆ ಮಿತ್ರನಾಗಿ ಕಂಡರೂ ಕ್ರಮೇಣ ಅದು ನಮ್ಮ ಶತ್ರು ಎಂಬುದು ತಿಳಿಯುತ್ತದೆ. ಏಕೆಂದರೆ ಆದ್ಯತೆಯು ಎಷ್ಟೋ ಬಾರಿ ಬದುಕಿನ ವಾಸ್ತವತೆಗೆ ನಮ್ಮನ್ನು ಕುರುಡಾಗಿಸುತ್ತದೆ.

**ಸಮಸ್ಯೆಗಳು**

ನಮ್ಮ ಉದ್ದೇಶಗಳನ್ನೇ ನಾವು ಮಾತನಾಡಿದಾಗ, ಆಗ ನುಡಿದಂತೆಯೇ ನಡೆದಾಗ ಸಮಸ್ಯೆಗಳು ಉದ್ಭವಿಸುವುದಿಲ್ಲ.

**ಲಾಭ ಮತ್ತು ನಷ್ಟ**

ಲಾಭದ ಆಸೆ ಗಟ್ಟಿಯಾದಷ್ಟು ನಷ್ಟದ ಹೊಡೆತ ತಾಳಿಕೊಳ್ಳುವ ಶಕ್ತಿ ಇಲ್ಲದಾಗುತ್ತದೆ.

ಸಾವೆನ್ನುವುದು ಇಲ್ಲವಾದಲ್ಲಿ ಬದುಕಿಗೆ ಬೆಲೆಯಿರುತ್ತಿರಲಿಲ್ಲ; ನಷ್ಟವೆನ್ನುವುದೇ ಇರಲಿಲ್ಲವಾದರೆ ಲಾಭಕ್ಕೂ ಕೂಡ. ಆಗ ಲಾಭದ ಹೊಡೆತದಿಂದ ತತ್ತರಿಸಿದ ಬಡವರು ಸಿಗುತ್ತಿದ್ದರೇನೋ.

**ಅಭಿವೃದ್ಧಿ**

ನೂಕು ನುಗ್ಗಲಿನ ಫುಟ್‌ಪಾತಿನ ಮೇಲೆ ನಿಂತವನೊಬ್ಬ ತಡೆಯೇ ಇಲ್ಲದೆ, ಒಂದೇ ಸಮನೆ ಓಡುತ್ತಿದ್ದ ವಾಹನಗಳನ್ನು ನೋಡುವುದರಲ್ಲಿ ಮುಳುಗಿಹೋದ. ವಿವಿಧ ರೀತಿಯ ವಾಹನಗಳು ಅವನಿಗೆ ರಂಜನೀಯ ಎನಿಸಿದವು. ಕಾರಿನ ಮುಂಭಾಗ ಹಿಂಭಾಗದಲ್ಲಿಯೂ, ಹಿಂಭಾಗ ಮುಂಭಾಗದಲ್ಲಿಯೂ ಇದ್ದರೆ, ಈ ವಾಹನಗಳ ಓಡಾಟ ಹಾಸ್ಯಕ್ಕೆ ದೊಡ್ಡ ವಿಷಯವಾಗುತ್ತಿತ್ತು ಎಂದುಕೊಂಡ. ನಂತರ ಅಲ್ಲಿಯೇ ನಿಂತ ರೈಲು ಒಂದನ್ನು ನೋಡಿ ಅದು ಹಿಂದಕ್ಕೆ ಚಲಿಸುತ್ತಿದೆಯೋ ಅಥವಾ ಮುಂದಕ್ಕೋ ಎಂದು ಹೇಳಲು ಸಾಧ್ಯವೇ ಎಂದು ಯೋಚಿಸಿದ. ನಂತರ

ಅವನಿಗನಿಸಿತು; ಎಲ್ಲಿಯವರೆಗೂ ಅವು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತ ಚಲಿಸುತ್ತಿರುತ್ತವೋ ಅಲ್ಲಿಯವರೆಗೂ ಹಿಂದಕ್ಕೋ-ಮುಂದಕ್ಕೋ ಎಂಬ ಗೊಂದಲ ಇರುವುದಿಲ್ಲ. ಒಂದು ಸಲ ನಿಂತವೆಂದರೆ ಅವು ಗೊಂದಲ ಸೃಷ್ಟಿಸುತ್ತವೆ. ಹಿಂಚಲನೆ ಮತ್ತು ಮುಂದೋಟಗಳಿರುವ ವ್ಯತ್ಯಾಸಗಳು ಅವನ ಮನಸ್ಸಿನಿಂದ ದೂರವಾದವು. ಕೊನೆಗೆ ಇದೇ ಅಭಿವೃದ್ಧಿಯೇ ಎಂದು ಕೇಳಿಕೊಂಡು ಆತ ಆಶ್ಚರ್ಯಪಟ್ಟ.

ಅಂತರಂಗದಿಂದ ಅವನಿಗೆ ಮಾತೊಂದು ರವಾನೆಯಾಯಿತು: ಅಭಿವೃದ್ಧಿಯ ಚಕ್ರ ಹೀಗೆಯೇ ಕೊನೆಯಿಲ್ಲದೆ, ಅನಂತವಾಗಿ ತಿರುಗುತ್ತಿರುತ್ತದೆ. ಅದು ಯಾವ ಕಡೆ ತಿರುಗುತ್ತಿದೆ ಎಂಬುದು ಅಸ್ಪಷ್ಟ. ಕೆಲವರು ಬಲಕ್ಕೆ ಎಂದರೆ ಮತ್ತೆ ಕೆಲವರು ಎಡಕ್ಕೆ ಎಂದು ವಾದಿಸುತ್ತಾರೆ. ಆದರೆ ಇದರ ಹಿಂದಿನ ಗುಟ್ಟು ಬೇರೆ. ಎದುರು ನಿಂತವನಿಗೆ 'ಅದು ಎಡದಿಂದ ಬಲಕ್ಕೆ ತಿರುಗುತ್ತಿದೆ' ಎನ್ನುತ್ತಾನೆ. ಹಿಂಭಾಗದಲ್ಲಿ ನಿಂತಿರುವವ ಅದು 'ಬಲದಿಂದ ಎಡಕ್ಕೆ' ಎಂದು ವಾದಿಸುತ್ತಾನೆ. ಈ ತಿರುಗುವಿಕೆ ಬಹಳ ನಿಧಾನ ಎನ್ನುವವರು ಅದು ಬೇಗ ಸುತ್ತಲಿ ಎಂದು ಬಯಸುವವರು, ಮತ್ತೆ ಕೆಲವರು ಅದು ತುಂಬಾ ವೇಗವಾಗಿ ಸುತ್ತುತ್ತಿದೆ ಎನ್ನುತ್ತಾರೆ. ಆದರೆ ವಾಸ್ತವದಲ್ಲಿ ಅಭಿವೃದ್ಧಿಯ ಚಕ್ರ ಯಾವುದೇ ನಿರ್ದಿಷ್ಟ ದಿಕ್ಕಿಗೂ ತಿರುಗುವುದಿಲ್ಲ. ಹಿಂದೆ ಮುಂದೆ ಎಂಬ ವ್ಯತ್ಯಾಸ ಅದಕ್ಕೆ ಗೊತ್ತಿಲ್ಲ. ಹಿಂದೆ-ಮುಂದೆ, ವೇಗ-ನಿಧಾನ ಎಲ್ಲವೂ ಸತತವಾಗಿ ಬದಲಾಗುವ ನಮ್ಮ ವಿಚಾರಧಾರೆಯ ಪ್ರತಿಬಿಂಬಗಳಷ್ಟೆ.

**ವಾಗ್ದಾನ**

ಗೆಳೆಯನೊಬ್ಬ ಭಾಷೆ ಕೊಡುವಂತೆ ಮಾಡುವುದು ಅವನ ಆರೋಗ್ಯವಂತ ಹಲ್ಲೊಂದನ್ನು ಕಿತ್ತುಕೊಂಡಂತೆ. ನಮಗದು ಅವಶ್ಯಕವಲ್ಲ.

**ಸಿದ್ಧಾಂತ ಪ್ರಚಾರ**

ಜ್ಯೋತಿಯೊಂದು ತನ್ನನ್ನು ಗುರುತಿಸಿಕೊಳ್ಳಲು ಪ್ರಸಾರಣಾ ಕಾರ್ಯಕ್ಕಿಳಿಯ ಬೇಕಿಲ್ಲ. ಜ್ಯೋತಿಯಾಗಿದ್ದರೆ ಎಲ್ಲೇ ಇದ್ದರೂ ಅದನ್ನು ಕಂಡು ಗುರುತಿಸುತ್ತಾರೆ.

**ಪ್ರವಾದಿಗಳು ಮತ್ತು ಧರ್ಮಗಳು**

ಅಭಿಪ್ರಾಯಗಳ ನಡುವಿನ ಭಿನ್ನಾಭಿಪ್ರಾಯಗಳಿಂದ ಸಮಸ್ಯೆಗಳು ತಲೆದೋರುತ್ತವೆ. ಅತಿ ದೊಡ್ಡ ಸಮಸ್ಯೆ ಉದ್ಭವಿಸುವುದು ಧರ್ಮದ ವಿಷಯದಲ್ಲಿ. ನಮ್ಮ ಅಭಿಪ್ರಾಯಕ್ಕೆ ಹೊಂದದ ಧರ್ಮಗುರುವೂ ಸೇರಿದಂತೆ ಎಲ್ಲರೂ ಜನ್ಮವೆತ್ತಲು ಕಾರಣ ಒಂದೇ ಮೂಲ ಎಂದು ಅರಿತರೆ ಈ ಸಮಸ್ಯೆಗಳ ತೀವ್ರತೆ ಕಡಿಮೆಯಾದೀತೇನೋ. ನಮಗೆ ದಾರಿ ತೋರುವ ಗುರುವೂ, ನಾವೂ ಎಲ್ಲರಿಗೂ



ಜೀವ ಕೊಟ್ಟಿದ್ದು, ಒಂದೇ ಶಕ್ತಿ ಹಾಗೂ ಎಲ್ಲರೂ ಸೇರುವುದು ಮಣ್ಣನ್ನೇ ಎಂಬುದನ್ನು ಅರಿತಾಗ ಅವರನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ.

**ಗಾತ್ರ**

ಗಾತ್ರದಿಂದ ನಾವು ಸುಲಭವಾಗಿ ಮೋಸ ಹೋಗುತ್ತೇವೆ. ಏಕೆಂದರೆ ಟೆಲಿಸ್ಕೋಪ್ ದೊಡ್ಡದಿದ್ದಷ್ಟೂ ಹೆಚ್ಚು ದೂರದ ವಸ್ತುವನ್ನು ನೋಡಬಹುದು. ಹಾಗೆಂದು ಹಣ್ಣು ದೊಡ್ಡದಿದ್ದಷ್ಟೂ ರುಚಿ ಹೆಚ್ಚಿರುತ್ತದೆ ಎಂದರೆ ತಪ್ಪಾಗುತ್ತದೆ.

**ಮಾಲೀಕತನ**

ಶಾಂತಿ ಸಮಯದಲ್ಲಿ ಶಾಂತರೀತಿಯ ರಕ್ಷಣಾ ಮಾರ್ಗಗಳಿಂದ ಒಡೆತನವನ್ನು ರಕ್ಷಿಸಿದರೆ ಯುದ್ಧ ಸಮಯದಲ್ಲಿ ಹಿಂಸಾಮಾರ್ಗದಿಂದ ಎಲ್ಲವನ್ನೂ ನಾಶಗೊಳಿಸಿ ಒಡೆತನವನ್ನು ರಕ್ಷಿಸಲಾಗುತ್ತದೆ.

**ವಿಚಿತ್ರ**

ನಮ್ಮಲ್ಲಿಲ್ಲ ಎಂಬುದನ್ನು ಹೊಂದಲು ಚಡಪಡಿಸುತ್ತೇವೆ; ಅದು ನಮ್ಮ ಬಳಿ ಬಂದ ನಂತರ ಯಾಕಾದರೂ ಬಂತೋ ಎಂದು ಕೊರಗುತ್ತೇವೆ.

ಹೆಚ್ಚು ಆಯಸ್ಸನ್ನು ಹೊಂದಲು ಚಡಪಡಿಸುವ ನಾವು ಸಮಯ ಬೇಗ ಸರಿಯುತ್ತಿಲ್ಲ ಎಂದು ಖಿನ್ನರಾಗುತ್ತೇವೆ.

**ಪಂದ್ಯ**

ಪುಟ್ಟ ತೋಟದ ಮಧ್ಯೆ ಪುಟ್ಟ ಮನೆ. ಮನೆಯೊಳಗಿನ ಪುಟ್ಟನೊಬ್ಬ ತನ್ನ ನಿದ್ರೆಯಲ್ಲಿ ಕನಸು ಕಾಣುತ್ತಿದ್ದಾನೆ. ಆ ಕನಸಿನಲ್ಲಿ ಅವನು ಹಲವು ಸ್ನೇಹಿತರ ಜೊತೆ ಇದ್ದಾನೆ. ಅವರೆಲ್ಲರೂ ತಮ್ಮ ತಂದೆ-ತಾಯಿಯರು ಕೊಡಿಸಿದ ಯಂತ್ರದ ಕುದುರೆಗಳನ್ನು ಓಡಿಸುವ ಹುಮ್ಮಸ್ಸಿನಲ್ಲಿದ್ದಾರೆ. ತಮ್ಮ ಸಂತೋಷಕ್ಕೆ ಹೆಚ್ಚಿನ ಮೆರುಗು ತರಲು ಅವರು ಗೆರೆಗಳನ್ನೆಳೆದು ಪಂದ್ಯ ಶುರುಮಾಡುತ್ತಾರೆ. ಎಲ್ಲ ಕುದುರೆಗಳು ಒಂದೇ ಸಮಯಕ್ಕೆ ಗುರಿ ಮುಟ್ಟುತ್ತವೆ. ಮತ್ತೆ ಪರೀಕ್ಷೆ ಮಾಡಿದರೂ ಹಾಗೇ ಆಗುತ್ತದೆ. ಈ ಏಕಪ್ರಕಾರದ ಸೋಲೂ ಅಲ್ಲದ, ಗೆಲುವೂ ಅಲ್ಲದ ಪಂದ್ಯ ಅವರಿಗೆ ಬೇಸರ ತರಿಸುತ್ತದೆ. ಇದನ್ನು ಸರಿಪಡಿಸಲು ಓಟದ ಪಥವನ್ನು ಉದ್ದಗೊಳಿಸಿದರೂ ಕೂಡ ಅದೇ ಫಲಿತಾಂಶ ಎದುರಾಗಿ ಬೇಸತ್ತ ಅವರು ಎಲ್ಲ ಕುದುರೆಗಳ ಓಟದ ಶಕ್ತಿಯೂ ಒಂದೇ ಸಮನಾಗಿರುವುದನ್ನು ಪತ್ತೆ ಹಚ್ಚುತ್ತಾರೆ. ಪಥವನ್ನು ಮತ್ತೂ ಉದ್ದಗೊಳಿಸಲು ಜಾಗ ಕಿರಿದಾದುದರಿಂದ ಉದ್ದವಿದ್ದ ಪಥವನ್ನು ವರ್ತುಲಾಕಾರಕ್ಕೆ

ಬದಲಾಯಿಸುತ್ತಾರೆ. ಈಗ ಒಬ್ಬ ಗೆಲ್ಲುತ್ತಾನೆ; ಹುಡುಗರು ಸಂಭ್ರಮಿಸುತ್ತಾರೆ. ಬಹುಬೇಗ ಹುಡುಗರ ಗುಂಪಿನಲ್ಲಿದ್ದ ಚುರುಕಿನವನೊಬ್ಬನು ಗೆಲುವಿನ ಕಾರಣ ತಿಳಿದುಕೊಳ್ಳುತ್ತಾನೆ. ಒಳಪಥ ಚಿಕ್ಕದು ಅದರಲ್ಲಿ ಓಡಿಸಿದ ಕುದುರೆ ಬೇರೆ ಪಥಗಳಲ್ಲಿನ ಕುದುರೆಗಳಿಗಿಂತ ಮೊದಲೇ ಶುರುಮಾಡಿದ ಜಾಗಕ್ಕೆ ಬಂದು ನಿಲ್ಲುತ್ತಿದೆ. ಹೇಗೋ ಮಾಡಿ ಪ್ರತಿ ಸುತ್ತಿನಲ್ಲಿಯೂ ತನಗೇ ಒಳಪಥ ಸಿಗುವಂತೆ ಮಾಡಿ, ಪ್ರತಿ ಪಂದ್ಯವನ್ನೂ ಗೆಲ್ಲುತ್ತಾನೆ. ಎಲ್ಲರಿಗೂ ಇವನ ಮೇಲೆ ಅನುಮಾನ ಬಂದು ಅವನು ಸಿಕ್ಕಿಬಿದ್ದ ಮೇಲೆ ಜಗಳವೇ ನಡೆದುಹೋಗುತ್ತದೆ. ನಂತರ ಪಂದ್ಯದ ರೀತಿ–ನೀತಿಯೇ ಬದಲಾಗುತ್ತದೆ. ಈಗ ಎಲ್ಲರೂ ಒಳಪಥ ಬೇಕೆಂದು ಜಗಳಕ್ಕೆ ನಿಲ್ಲುತ್ತಾರೆ. ಕೊನೆಗೆ ಅದಕ್ಕಾಗಿ ಟಾಸ್ ಹಾರಿಸಲಾಗುತ್ತದೆ. ಆದರೆ ಟಾಸ್‌ಗೆದ್ದ ಕೂಡಲೇ ಫಲಿತಾಂಶ ಕೂಡ ಗೊತ್ತಾಗಿ ಪಂದ್ಯ ನೀರಸ ಎನಿಸುತ್ತದೆ. ಈ ಏಕತಾನತೆಯನ್ನು ಸಹಿಸಲಾಗದೆ ಹುಡುಗರು ಪಂದ್ಯವಾಡುವುದನ್ನು ಬಿಟ್ಟು ಮನೆಗೆ ತೆರಳುತ್ತಾರೆ. ಆಟ ಕೊನೆಗೊಳ್ಳುತ್ತದೆ. ಹಾಗೆಯೇ ಕನಸು ಕಾಣುತ್ತಿರುವವನ ನಿದ್ರೆ ಕೂಡ ಕೊನೆಗೊಂಡು ಎಚ್ಚೆತ್ತ ಅವನಿಗೆ ಅರಿವು ಮೂಡುತ್ತದೆ; ಇದೆಲ್ಲ ಕೇವಲ ಕನಸು.

**ವಾಸ್ತವ**

ಸ್ಥಿರವಾದ ವಾಸ್ತವಕ್ಕಿಂತ ಕ್ಷಣಿಕವಾಗಿರುವುದಕ್ಕೇ ನಾವು ಹೆಚ್ಚು ಮಾರು ಹೋಗುತ್ತೇವೆ ಹಾಗೂ ಅದನ್ನು ಪಡೆಯಲು ಶ್ರಮಿಸುತ್ತೇವೆ. ಕೊನೆಗೆ ನಮ್ಮ ಬಳಿ ಏನೂ ಉಳಿದಿಲ್ಲದಿರುವುದನ್ನು ಕಂಡು ದಿಗಿಲಾಗುತ್ತೇವೆ.

**ಪುನರ್ಜನ್ಮ**

ಮರವೊಂದು ಬೀಜಕ್ಕೆ ಜನ್ಮ ಕೊಡುತ್ತದೆ. ಬೀಜ ಮರಕ್ಕೆ, ಕೋಳಿ ಮೊಟ್ಟೆಗೆ, ಮೊಟ್ಟೆ ಕೋಳಿಗೆ, ದಿನದ ಕೊನೆಯು ರಾತ್ರಿಗೆ, ರಾತ್ರಿಯು ದಿನಕ್ಕೆ. ಹೀಗೆ ಪ್ರತಿಯೊಂದೂ ತಾನು ಜನ್ಮ ಕೊಟ್ಟಿದ್ದುದರಿಂದ ಜನ್ಮ ಪಡೆಯುತ್ತದೆ ಎನ್ನುವುದನ್ನು ನಂಬುವುದಾದರೆ ಜೀವನವು ಸಾವಿಗೆ, ಸಾವು ಮತ್ತೊಂದು ಜೀವಕ್ಕೆ ಜನ್ಮ ಕೊಡುವುದನ್ನು ತಿರಸ್ಕರಿಸುವುದು ಸರಿಯಲ್ಲ.

**ಪರಸ್ಪರ ಸಮಾನ**

ನಾನು ಹೊಡೆಯುವ ಶಕ್ತಿ ಹೊಂದುವವರೆಗೂ ಜಗಳಕ್ಕೆ ಬರಬೇಡ.
ಕೊಡುವ ಶಕ್ತಿ ಬರುವವರೆಗೂ ನನಗೆ ಕೊಡಬೇಡ.
ಪ್ರೀತಿಸುವ ಶಕ್ತಿ ಬರುವವರೆಗೂ ಪ್ರೀತಿಸಬೇಡ.
ಮರೆಯುವ ಶಕ್ತಿ ಹೊಂದುವವರೆಗೂ ನನ್ನನ್ನು ಮರೆಯಬೇಡ.



**ಸಂಬಂಧ**

ಕೆಲವು ಸಲ ಗೆಳೆಯನೊಬ್ಬ ಸಂಬಂಧಿಯಾಗಬಹುದು, ಆದರೆ ಸಂಬಂಧಿಗಳೆಲ್ಲ ಗೆಳೆಯರಾಗಲು ಸಾಧ್ಯವಿಲ್ಲ.

**ನಂಬಿಕೆ**

ಸ್ಥಿರತೆಯು ನಂಬಿಕೆಗೆ ದಾರಿಯಾಗುತ್ತದೆ. ಹೀಗಾಗಿ ಎಂದೂ ಕಾರ್ಯಕ್ಷಮತೆಯಿಲ್ಲದವನು ಎಂದೋ ಒಮ್ಮೆ ಕಾರ್ಯಕ್ಷಮತೆ ತೋರದವನಿಗಿಂತ ಮೇಲು. ಅವನ ಬಳಿ ಇಲ್ಲ ಎಂದಾಗ ಸಹ ಅವನು ಒಂದು ರೀತಿಯಲ್ಲಿ ನಂಬಿಕಸ್ಥ. ಏಕೆಂದರೆ ಅವನಿಂದ ಏನನ್ನು ನಿರೀಕ್ಷಿಸಬಹುದು/ನಿರೀಕ್ಷಿಸಲಾಗದು ಎಂಬುದನ್ನು ಮನಗಂಡು ಮುಂದಿನ ಕಾರ್ಯದ ಕುರಿತು ಚಿಂತಿಸಬಹುದು.

**ಧರ್ಮ**

ಏನನ್ನು ಮಾಡಬಾರದು ಎಂದು ತಿಳಿದುಕೊಳ್ಳುವುದು ಧರ್ಮ.

ಎಲ್ಲ ಧರ್ಮಗಳು ಪರಸ್ಪರ ಪ್ರೀತಿ, ಅನ್ಯೋನ್ಯತೆಯಿಂದ ಇರುವುದನ್ನು ಬೋಧಿಸುತ್ತವೆ. ಹಾಗಾಗಿ ಯಾವುದೋ ಧರ್ಮವನ್ನು ಕಡೆಗಣಿಸುವುದು ನಮ್ಮ ಧರ್ಮವನ್ನು ಕಡೆಗಣಿಸಿದಂತೆಯೇ.

**ನಿವೃತ್ತ**

ಒಂದು ವಿಷಯದಿಂದ ನಿವೃತ್ತನಾಗುವುದರ ಬೆಲೆ ಆ ನಿವೃತ್ತೆಯಲ್ಲಿ ಯಾವುದೇ ಹತಾಶೆ ಇಲ್ಲದಿರುವುದನ್ನು ಅವಲಂಬಿಸಿರುತ್ತದೆ.

**ವಿರೋಧ**

ವಿದ್ಯುತ್ ತಂತಿಯೊಂದು ತನ್ನಲ್ಲಿ ಹರಿಯುವ ವಿದ್ಯುಚ್ಛಕ್ತಿಯನ್ನು ವಿರೋಧಿಸಿದಾಗ ಬಿಸಿಯಾಗುವಂತೆ ಮನುಷ್ಯನೊಬ್ಬನ ಒಳ್ಳೆತನದ ಹರಿವನ್ನು ಅಹಂ ವಿರೋಧಿಸಿದಾಗ ಅವನ ವ್ಯಕ್ತಿತ್ವ ಹದಗೆಡುತ್ತದೆ.

**ಫಲಾಫಲ**

ತಾನು ಮಾಡುವ ಎಲ್ಲ ಕರ್ಮ–ಕ್ರಿಯೆಗಳ ಫಲ ತನ್ನ ಕೈಯಲ್ಲಿಲ್ಲ ಎಂದು ಅರಿತರೆ ಮಾನವ ಹೆಚ್ಚು ಸುಖಿಯಾಗಿ ಬಾಳುತ್ತಾನೆ.

**ಪರಾವರ್ತನ**

ಸಕಲವೂ ತಾನು ಉದಯಿಸಿ ಬಂದ ದಿಕ್ಕಿಗೆ ಹಿಂತಿರುಗಿ ಆತನಲ್ಲಿ ಲೀನವಾಗುತ್ತದೆ.

**ಐಶ್ವರ್ಯ**

ಬೇರೆಯವರಿಗೆ ಪ್ರೀತಿ ತೋರುವುದರಲ್ಲಿ ಮುಂದಿದ್ದಷ್ಟೂ ನಾವು ಶ್ರೀಮಂತರು. ಬರೀ ಆಸ್ತಿಯೇ ನಮ್ಮ ಐಶ್ವರ್ಯವಾಗಿದ್ದರೆ ಬೇರೆಯವರು ಬಡವರಾಗಿರುವುದು ಸರಿಯಲ್ಲ.

**ಹಕ್ಕುಗಳು ಮತ್ತು ಜವಾಬ್ದಾರಿಗಳು**

ಬರಿ ಹಕ್ಕುಗಳಿಗೋಸ್ಕರ ಹೋರಾಡಿ ಜವಾಬ್ದಾರಿ ಹೊರುವುದರಿಂದ ಪರಾರಿಯಾಗುವ ಯೋಚನೆ ಬೆಟ್ಟದಷ್ಟು ದುಡಿಯಬೇಕು ಆದರೆ ಎಳ್ಳಷ್ಟು ಮಾತ್ರ ಶ್ರಮಿಸಬೇಕು ಎಂಬಂತೆ.

**ನದಿ**

ಹಲವು ನದಿಗಳು ತಮ್ಮ ಗಮ್ಯಸ್ಥಾನವಾದ ಸಮುದ್ರದ ಹತ್ತಿರವೇ ಹುಟ್ಟಿದರೂ ಸಮುದ್ರವನ್ನು ತಲುಪುವುದು ದೂರದ ಎಲ್ಲ ಸ್ಥಳಗಳನ್ನು ಸುತ್ತಿ ಕೋಟ್ಯಾಂತರ ಜನಕ್ಕೆ ತಮ್ಮಿಂದಾದ ಸಹಾಯ ಮಾಡಿದ ನಂತರ, ಸಂತನೊಬ್ಬನ ಜೀವನವೂ ಇದೇ ರೀತಿ; ಆಧ್ಯಾತ್ಮಿಕ ಪರಿಪೂರ್ಣತೆಗೆ ಹತ್ತಿರವಾದ ಜಾಗೃತ ಸ್ಥಿತಿಯನ್ನು ಹುಟ್ಟಿನಲ್ಲಿಯೇ ಪಡೆದರೂ ದೇಶಾಂತರ ಅಲೆದು, ಸಾವಿರಾರು ಜನರಿಗೆ ದರ್ಶನ, ಉಪದೇಶಗಳನ್ನು ನೀಡಿ ಸೃಷ್ಟಿಕರ್ತನಲ್ಲಿ ಲೀನನಾಗುತ್ತಾನೆ.

**ಜಾಗ ಮತ್ತು ಸ್ಥಳ**

ಈ ಜಗತ್ತು ತುಂಬ ದೊಡ್ಡ ಜಾಗವಾದರೂ ತಂಗಲು ಸ್ಥಳವಿಲ್ಲ.

**ರೂಢಿಮಾರ್ಗ**

ರೂಢಿಮಾರ್ಗದಲ್ಲೇ ಚಲಿಸುವುದರಿಂದ ಮುಖ್ಯವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಅನುಭವಗಳಿಂದ ನಮ್ಮನ್ನು ನಾವು ದೂರವಿಡುತ್ತೇವೆ. ಅನುಭವ ನಮಗೆ ಸಿಗಬಹುದಾದ ಅತಿದೊಡ್ಡ ಗುರು.



**ತ್ಯಾಗ**

ತ್ಯಾಗವು ಇತರ ವಿಷಯಗಳಂತೆ ಸಾಪೇಕ್ಷವಾದುದು. ನೂರು ರೂಪಾಯಿ ದಾನವಾಗಿ ಕೊಟ್ಟವನು ಸಾವಿರ ರೂಪಾಯಿ ಕೊಟ್ಟವನಿಗಿಂತ ಹೆಚ್ಚು ದಯಾಮಯಿಯಾಗಿ ಕಾಣುವನು. ಹೆಚ್ಚು ತ್ಯಾಗಿಯೂ ಆಗಿರುತ್ತಾನೆ.

**ವಿಮಲತೆ**

ಸಾಧುತ್ವ ಮತ್ತು ವಿಮಲತೆಗಳೆಂದರೆ ನಮ್ಮಲ್ಲಿ ಯಾವುದೇ ಕೊಳಕನ್ನು ಇಟ್ಟುಕೊಳ್ಳದಿರುವುದಷ್ಟೇ ಅಲ್ಲ, ಬೇರೆಯವರಲ್ಲಿರುವ ದುರ್ಗುಣಗಳನ್ನು ಗುರುತಿಸದಿರುವುದೂ ಆಗಿದೆ. ಇದನ್ನರಿತ ಎಷ್ಟೋ ಸಾಧುಸಂತರು ಗುಹೆ, ಕಾಡುಗಳಿಗೆ ಹೋಗಿ ಎಲ್ಲರಿಂದ ತಪ್ಪಿಸಿಕೊಂಡು ತಪಸ್ಸು ಮಾಡುವುದಿಲ್ಲ, ಬದಲಾಗಿ ಜೀವನದ ಕರ್ತವ್ಯಗಳನ್ನು ಮಾಡುತ್ತ ತಮ್ಮ ಆಧ್ಯಾತ್ಮಿಕ ಜೀವನವನ್ನು ಮುನ್ನಡೆಸುತ್ತಾರೆ.

**ಸಂತೃಪ್ತಿ**

ನೀರಿಗೆ ಹಾಕಿದ ಮೊದಲ ಕ್ಷಣಗಳಲ್ಲಿ ತೇಲುವ ಹತ್ತಿಯು ತನ್ನ ಎಲ್ಲ ಎಳೆಗಳೂ ಸಂಪೂರ್ಣವಾಗಿ ತೊಯ್ದ ಮೇಲೆ ಮುಳುಗಿ ತಳ ಸೇರುತ್ತದೆ. ನಮ್ಮ ಜ್ಞಾನಾರ್ಜನೆ ಸಹಿತ ಹೀಗೆಯೇ ಆಗಬೇಕು. ವಿಷಯವೊಂದರ ಕುರಿತ ಅಧ್ಯಯನ ಈ ರೀತಿಯದ್ದಾಗಿದ್ದರೆ ತಳ ಸೇರಿ ಆ ವಿಷಯದ ಸತ್ಯವನ್ನರಿಯಬಹುದು.

**ಸೆಕೆಂಡ್ ಹ್ಯಾಂಡ್**

ಮಳೆನೀರು ಮತ್ತು ಅಣೆಕಟ್ಟಿನಲ್ಲಿ ನಿಂತ ನೀರಿನ ನಡುವೆ ಇರುವಂತೆ ಹೊಸದಲ್ಲದ, ಯಾರೋ ಉಪಯೋಗಿಸಿದ ವಸ್ತುವಿಗೂ ಹೊಚ್ಚಹೊಸದಕ್ಕೂ ಅಜಗಜಾಂತರ ವ್ಯತ್ಯಾಸವಿರುತ್ತದೆ.

**ನೋಡುವುದು ಮತ್ತು ಕಲಿಯುವುದು**

ನೋಡುವುದು ಕಲಿಯುವುದಲ್ಲ, ವಿಶಾಲವಾದ ನದಿಯೊಂದನ್ನು ನೋಡಬಹುದು. ಆದರೆ ಅದರ ಆಳ ಅಗಲಗಳು ನಮಗೆ ಸರಿಯಾಗಿ ತಿಳಿಯುವುದಿಲ್ಲ.

**ಆತ್ಮಗೌರವ**

ಆತ್ಮಗೌರವಕ್ಕೂ ಸ್ವ–ಪ್ರತಿಷ್ಠೆಗೂ ಇರುವ ಗಡಿರೇಖೆಯನ್ನು ವಿಶ್ಲೇಷಿಸುವುದು ಆಸಕ್ತಿಯುತ ಅಧ್ಯಯನಗಳಲ್ಲೊಂದು.

**ನಿಷ್ಕಾಮ ಕರ್ಮ**

ಸೇವೆ ಎಂಬ ಪದವು ನಿಸ್ವಾರ್ಥ ಅಥವಾ ನಿರಪೇಕ್ಷಕತೆಯೆಂಬ ವಿಶೇಷಣಗಳಿಂದ ತನ್ನ ಯೋಗ್ಯತೆಯನ್ನು ಪಡೆದುಕೊಳ್ಳುತ್ತದೆ. ಆದರೆ ಇಂತಹ ವಿಶೇಷಣಗಳು ಬೇಕಿಲ್ಲ. ನಿಸ್ವಾರ್ಥತೆಯಿಲ್ಲವೆಂದರೆ ಯಾವುದನ್ನೂ ಸೇವೆ ಎಂದು ಕರೆಯಬೇಕಾಗಿಲ್ಲ.

**ಪ್ರವಚನ**

ನಮ್ಮೊಳಗಿನಿಂದ ಪಡೆಯುವುದು ಯೋಗ್ಯ ಮತ್ತು ಅತಿಶ್ರೇಷ್ಠವಾದ ಪ್ರವಚನ; ಹೊರಗಿನಿಂದ ಕೇಳಿದುದಲ್ಲ.

**ಸೇವೆ**

ಸೇವೆ ಮಾಡುವವನು ತೃಪ್ತಿಯನ್ನೀಯುವುದು ತನ್ನ ಕರ್ತವ್ಯವಷ್ಟೇ ಅಲ್ಲ, ಹಕ್ಕೂ ಸಹ ಎಂದು ತಿಳಿದಿರಬೇಕು. ಸೇವೆಯಲ್ಲದ ಸೇವೆಯೆಂದರೆ ಬಾಯಿ ಮಾತಿನ ಸೇವೆ.

**ನೆರಳು**

ಎಲ್ಲಿಯವರೆಗೂ ಸತ್ಯಪ್ರಕಾಶವಾದ ಸೂರ್ಯನನ್ನು ನೋಡುತ್ತೇವೋ ಅಲ್ಲಿಯವರೆಗೂ ಸುಳ್ಳಿನ ಕರಿನೆರಳು ನಮ್ಮ ಹಿಂದಿರುತ್ತದೆ.

**ಪ್ರಕಾಶ**

ಕೇಡುಗರ ಸನ್ನಿಧಿಯಲ್ಲಿ ಕೆಟ್ಟದ್ದು ಅತಿ ಸುಲಭವಾಗಿ ಒಳ್ಳೆಯದೆಂದು ಕಂಗೊಳಿಸುತ್ತದೆ. ಆದರೆ ಸತ್ಸಂಗದಲ್ಲಿ ಒಳ್ಳೆಯದಕ್ಕೆ ಇಂಥ ಅವಕಾಶವಿಲ್ಲ.

**ಮೌನ**

ಮೌನ ಎಲ್ಲಕ್ಕಿಂತ ಹೆಚ್ಚು ಶಕ್ತಿಯುತವಾದದ್ದು. ನಾವು ಪೂಜೆ ಮಾಡುವ ವಿಗ್ರಹಗಳು ನಮ್ಮೊಂದಿಗೆ ಮಾತಾಡುವ ಹಾಗಿದ್ದರೆ, ಅವುಗಳ ಬಗೆಗೆ ನಮಗಿರುವ ಅರ್ಧ ಪಟ್ಟು ಭಕ್ತಿಯೂ ಸಹ ಇರುತ್ತಿರಲಿಲ್ಲ.

**ಸರಳ ಜೀವನ**

ಹಬ್ಬದೂಟ ಇಷ್ಟವಾದರೂ ದಿನವೂ ಅದೇ ಆದರೆ ಬೇಸರ ತರಿಸುತ್ತದೆ. ರಾಗಿ ರೊಟ್ಟಿ ಹಾಗಲ್ಲ, ಅದನ್ನು ಎಂದಿಗೂ ಮೆಚ್ಚುತ್ತೇವೆ.



**ಕೊಳಗೇರಿಗಳು**

ಸರಿಯಾದ ಯೋಜನೆ, ಮುನ್ನೋಟಗಳಿಲ್ಲದೆ ಮಾಡಿದ ನಗರಗಳು ಕೊಳಗೇರಿಗಳ ಹುಟ್ಟಿಗೆ ಕಾರಣವಾಗುತ್ತವೆ. ಅಥವಾ ಸ್ಥಳವಿರದೇ ತುಂಬಿ ಹೋಗಿರುವ ನಗರಗಳಿಗೆ ಎಲ್ಲೆಡೆಯಿಂದ ಬರುವ ಜನರ ಸಂಖ್ಯೆ ಹೆಚ್ಚಾದಾಗಲೂ ಹಾಗಾಗ ಬಹುದು. ನಮ್ಮ ಮನಸ್ಸೂ ಅಷ್ಟೆ. ಸರಿಯಾದ ದೃಷ್ಟಿಕೋನದ ವ್ಯವಸ್ಥೆಯಿಲ್ಲದಿದ್ದರೆ, ಯೋಚನೆಗಳ ಕೊಳಗೇರಿಗಳು ಹುಟ್ಟಿಕೊಳ್ಳುತ್ತವೆ. ತಡೆಯಿರದೆ ಹರಿದುಬರುವ ಯೋಚನೆಗಳ ಸಾಗರವನ್ನು ಸರಿಯಾಗಿ ಸಂಯೋಜಿಸಿ ಸಂರಕ್ಷಿಸದಿದ್ದಾಗ ಸಹ ಹೀಗಾಗಬಹುದು.

**ಸಮಾಜ**

ಮನಸ್ಸು ದೇಹಕ್ಕೆ ಹೇಗೆ ಮುಖ್ಯವೋ ಸಮಾಜವು ವ್ಯಕ್ತಿಗೆ ಅಷ್ಟೇ ಮುಖ್ಯವಾಗಿದೆ. ಆದರೆ ಇದು ಹೀಗಿರಬೇಕೇ?

**ವೇಗ**

ಅತಿವೇಗದಿಂದ ಚಲಿಸುವವನು ಎಲ್ಲರಿಗಿಂತ ಮುಂದಿದ್ದಾನೆ ಎಂದು ಹೇಳಲಾಗದು.

**ನಿಲುವು**

ನಮ್ಮ ನಿಲುವು ನಮ್ಮ ವ್ಯಕ್ತಿತ್ವವನ್ನಾಧರಿಸಿದೆಯೇ ಹೊರತು ನಮ್ಮ ಗಾತ್ರವನ್ನಲ್ಲ.

**ಅಂತರ್ಜಲ**

ಹೇಗೆ ಅಂತರ್ಜಲವು ಭೂಮಿಯೊಳಗಿದ್ದೂ ಭಾವಿಯ ನೀರಿನಂತೆ ಉಪಕಾರಿಯೋ ಹಾಗೆ ಆಶೀರ್ವಾದದ ಆಡದ ಮಾತುಗಳು ಆಡಿದ ಮಾತುಗಳಷ್ಟೇ ಶಕ್ತಿಯನ್ನು ಹೊಂದಿರುತ್ತವೆ ಹಾಗೂ ಪರಿಣಾಮ ಬೀರುತ್ತವೆ.

**ಮೂಢನಂಬಿಕೆಗಳು ಮತ್ತು ಧರ್ಮ**

ಮೂಢನಂಬಿಕೆಗಳಲ್ಲಿ ವಿಶ್ವಾಸವಿರಿಸಿದ ವ್ಯಕ್ತಿಯೊಬ್ಬ ಧರ್ಮನಿಷ್ಠನೂ ಆಗಿರಬಹುದು. ಆದರೆ ಧರ್ಮನಿಷ್ಠನಾಗಿರುವವನು ಮೂಢನಂಬಿಕೆಗಳನ್ನು ಒಪ್ಪುವುದಿಲ್ಲ.

**ಅಂತಿಮ**

ನಾವು ದೊಡ್ಡ ತೆರೆಯ ಮೇಲೆ ನೋಡುವ ಸಿನಿಮಾ ಹೇಗೆ ಸಣ್ಣ ರೀಲುಗಳ ಹರಿದು ಬಂದ ಬೆಳಕಿನ ಆಟವೋ, ಜೀವನವೂ ಸಹ ಅಂತಿಮವಾಗಿ ದೇವರು ತನ್ನ ಸಣ್ಣ ರೀಲುಗಳನ್ನು ಬಳಸಿ ಕಟ್ಟುವ ಸಣ್ಣಕಥೆ. ಇದು ಪರಮಸತ್ಯ. ಏಕೆಂದರೆ ಮಾನವನಿಗೆ ತನ್ನ ಹುಟ್ಟಿನಿಂದ ಸಾವಿನವರೆಗೂ, ತನ್ನ ಏಳುಬೀಳುಗಳ ಮೇಲೆ, ತನ್ನ ಆಯುಷ್ಯದ ಮೇಲೆ ಯಾವುದೇ ಹಿಡಿತವಿಲ್ಲ. ನಮ್ಮಲ್ಲಿ ಪರಮಶ್ರೇಷ್ಠರಾದವರೂ ಕೂಡ ಇಡೀ ಸೃಷ್ಟಿಯಲ್ಲಿ ಸಣ್ಣ ಕಣವಷ್ಟೇ ಆಗಬಲ್ಲರು.

**ಸಿಹಿ**

ಹಣ್ಣಿನಲ್ಲಿರುವಂತೆ ಮನುಷ್ಯನಲ್ಲಿರುವ ಸಹಜ ಸಿಹಿಯೂ ಸಹ ಅವನು ಮಾಗಿ ಹಣ್ಣಾದ ಸೂಚನೆ.

**ಕಣ್ಣೀರು**

ನೀರು ದೇಹವನ್ನು ಸ್ವಚ್ಛಗೊಳಿಸಿದರೆ, ಕಣ್ಣೀರು ಆತ್ಮವನ್ನು.

**ಆಸೆ ಮತ್ತು ಗೆಲುವು**

ಆಸೆಯೊಂದನ್ನು ಜಯಿಸಲಾಗದುದನ್ನು ನಮ್ಮ ವ್ಯಕ್ತಿತ್ವದ ಸೋಲು ಎಂಬುದನ್ನು ಒಪ್ಪುವುದಾದರೆ ದೇಶವೊಂದು ಮತ್ತೊಂದು ದೇಶವನ್ನು ವಶಪಡಿಸಿಕೊಳ್ಳುವುದನ್ನೂ ಸಹ ಆ ದೇಶದ ಸೋಲು ಎಂದು ಪರಿಗಣಿಸಬೇಕು. ತನ್ನದಲ್ಲದ ವಸ್ತುವನ್ನು, ಜಾಗವನ್ನು, ದೇಶವನ್ನು ತನ್ನದಾಗಿಸಿಕೊಳ್ಳಬೇಕೆಂಬ ದುರಾಸೆಯನ್ನು ಹತ್ತಿಕ್ಕಲಾಗದಿದ್ದರೆ ಅದು ಸೋಲೇ ಅಲ್ಲವೇ?

**ಕಳ್ಳತನ ಮತ್ತು ಕಾಣಿಕೆ**

ಮಾಡದ ಕೆಲಸಕ್ಕೆ ಬಂದ ಹೊಗಳಿಕೆಯನ್ನು ಒಪ್ಪಿಕೊಳ್ಳುವುದು ಕಳ್ಳತನ ಎನ್ನಬಹುದಾದರೆ, ಮಾಡದ ಕೆಲಸಕ್ಕೆ ಬಂದ ತೆಗಳಿಕೆಯನ್ನು ಕಾಣಿಕೆ ಎನ್ನಬಹುದು ಮತ್ತು ಎರಡನ್ನೂ ಇದೇ ರೀತಿಯಲ್ಲಿ ನೋಡಬೇಕು.

**ಯೋಚನೆ**

ನಾವು ನಾವಾಗಿರಲು ಕಾರಣ ನಾವು ತೊಡುವ ಬಟ್ಟೆಗಳು, ವಾಸಿಸುವ ಸ್ಥಳ, ನಮ್ಮ ಮಾತು ಅಥವಾ ಕೃತಿ ಅಲ್ಲ, ನಮ್ಮ ಯೋಚನೆಗಳು.



**ಮಿತವ್ಯಯ ಮತ್ತು ಜುಗ್ಗುತನ**

ಮನೆಯ ದೈನಂದಿನ ನಿರ್ವಹಣೆಯಲ್ಲಿನ ಹಣದ ಮೇಲಿನ ಬಿಗಿ ಹಿಡಿತ ನಮ್ಮ ಆರ್ಥಿಕ ಸಂಪನ್ಮೂಲದ ನಿರ್ವಹಣೆಯಾದರೆ ಮನೆಗೆ ಬಂದ ಅತಿಥಿಗಳು ಬಂದಾಗ ನಾವು ತೋರುವ ಅದೇ ಹಿಡಿತ ನಮ್ಮನ್ನು ಜುಗ್ಗರನ್ನಾಗಿ ಮಾಡುತ್ತದೆ.

**ಓರಣ**

ಎಲ್ಲ ವಸ್ತುಗಳನ್ನು ಶುಚಿಯಾಗಿಸಿ ಓರಣ ಮಾಡಿರುವುದರಿಂದ ಹೇಗೆ ನಮ್ಮ ಮನೆ ಒಪ್ಪವಾಗುವುದೋ ನಮ್ಮ ಯೋಚನೆಗಳನ್ನು ಇದೇರೀತಿ ಇಟ್ಟುಕೊಂಡರೆ ನಮ್ಮ ಮನಸ್ಸು ಕೂಡ ಒಪ್ಪವಾಗಿರುತ್ತದೆ.

**ಸಮಯ**

ಸಮಯ ಕಳೆಯುವ ದಾರಿಗಳನ್ನು ಯಾರು ಹುಡುಕುತ್ತಾನೋ ಅವನನ್ನು ಸಮಯವು ಕೊಲ್ಲುತ್ತದೆ.

**ತಾಳ್ಮೆ**

ನಮ್ಮ ಸಹನಾಶಕ್ತಿಯನ್ನು ಉಪಯೋಗಿಸಿದ್ದೇವೆ ಎಂದೆನಿಸಿದಾಗ ಮಾತ್ರ ಅದು ತಾಳ್ಮೆ. ಇಲ್ಲದಿದ್ದರೆ ಅದು ನಮ್ಮ ದುರ್ಬಲತೆಯನ್ನು ಅಥವಾ ಉದಾಸೀನತೆಯನ್ನು ತೋರಿಸುತ್ತದೆ.

**ಟಾಸಿಗೆ ಹಾರಿಸಿದ ನಾಣ್ಯ**

ಟಾಸಿಗೆ ಹಾರಿಸಿದ ನಾಣ್ಯವು ಅಷ್ಟೇನು ಮುಖ್ಯವಲ್ಲ ಎನಿಸಿದರೂ ಅದು ಒಳ್ಳೆಯ ಪರಿಕಲ್ಪನಾ ಜ್ಞಾನವನ್ನು ಹೊಂದಿದೆ.

**ಶಾಂತಿ**

ನೀರು ಕದಡದೆ ಇದ್ದಷ್ಟೂ ನಮ್ಮ ಪ್ರತಿಬಿಂಬವನ್ನು ಚೆನ್ನಾಗಿ ತೋರಿಸುತ್ತದೆ;
ಮನಸ್ಸು ಶಾಂತಯುತವಾಗಿದ್ದಷ್ಟೂ ಆತ್ಮವನ್ನು ಚೆನ್ನಾಗಿ ಬಿಂಬಿಸುತ್ತದೆ.

**ನಿಧಿ ಹುಡುಕಾಟ**

ಶಾಲೆಯೊಂದರ ಹುಡುಗರು ನಿಧಿ ಹುಡುಕುವ ಆಟವನ್ನಾಡಲು ನಿರ್ಧರಿಸುತ್ತಾರೆ. ಮೊದಲು ಅವರೆಲ್ಲ ಒಂದು ಮೇಜಿನ ಸುತ್ತ ನೆರೆಯುತ್ತಾರೆ. ಮೇಜಿನ ಮೇಲಿನ ತಟ್ಟೆಯಲ್ಲಿ ಆಟದ ಪ್ರಾರಂಭದ ಸುಳಿವನ್ನು ಬರೆದಿಡಲಾಗಿತ್ತು.

ಅದನ್ನು ಸ್ಪರ್ಧಿಗಳಿಗೆ ನೀಡಲಾಯಿತು. ಅದನ್ನು ಓದಿದ ಮೇಲೆ ಮುಂದಿನ ಸುಳಿವು ತಲುಪಲು ತಮಗೆ ತಿಳಿದಂಥ ದಿಕ್ಕಿಗೆ, ಎಲ್ಲರೂ ಚದುರಿಹೋದರು.

ಕೆಲವರು ಗುಂಪುಗಳಾಗಿ ಕೆಲವರು ತಾವೊಬ್ಬರೇ ನಿಧಿ ಹುಡುಕುವುದನ್ನು ಪ್ರಾರಂಭ ಮಾಡಿದರು. ಮೊದಲೇ ಯೋಜಿಸಿದಂತೆ ಆಟವು ಇಡೀ ದಿನ ನಡೆಯುವುದರಿಂದ ದಾರಿ ಮಧ್ಯೆಯಲ್ಲಿ ಪ್ರಯಾಸದ ಬಾಯಾರಿಕೆಗೆ, ಹೊಟ್ಟೆಯ ಹಸಿವಿಗೆ ಅವರಿಗೆ ವ್ಯವಸ್ಥೆಯನ್ನು ಮಾಡಲಾಗಿತ್ತು.

ಸೂರ್ಯ ಕೆಳಗಿಳಿಯುತ್ತಿದ್ದ ಸಮಯಕ್ಕೆ ಎಲ್ಲರೂ ಮರಳಿ ಹಿಂತಿರುಗುತ್ತಿದ್ದರು. ಆಟ ಪ್ರಾರಂಭಿಸಿದ ಸ್ಥಳಕ್ಕೇ ಮರಳಿ ಧಾವಿಸಿ ತಮ್ಮ ತಮ್ಮ ದಾರಿಯಲ್ಲಿ ಜರುಗಿದ ರೋಚಕತೆಗಳನ್ನು, ಸುಳಿವುಗಳನ್ನು ಭೇದಿಸಿದ ತಮ್ಮ ಬುದ್ಧಿಶಕ್ತಿಯ ಕುರಿತೂ ಹೇಳಿಕೊಳ್ಳತೊಡಗಿದರು.

ಸುಳಿವುಗಳು ಅವರನ್ನು ಎಲ್ಲೆಲ್ಲಿಗೋ ಒಯ್ದಿದ್ದವು. ಸುಳಿವೊಂದು ಕೆಲವರಿಗೆ ಒಂದು ರೀತಿಯಲ್ಲಿ ಅರ್ಥವಾಗಿದ್ದರೆ ಮತ್ತೂ ಕೆಲವರು ಅದನ್ನು ಬೇರೊಂದು ರೀತಿಯಲ್ಲಿ ಅರ್ಥೈಸಿದ್ದರು. ತಮ್ಮ ದಾರಿಯಲ್ಲಿ ಸಿಕ್ಕ ಹಲವರ ಅಭಿಪ್ರಾಯಗಳೂ ಸಹ ಒಬ್ಬೊಬ್ಬರಿಗೆ ಒಂದು ಅರ್ಥವನ್ನು ನೀಡಿದ್ದವು.

ಹುಡುಕಾಟವು ಅವರನ್ನು ಬಯಲಿಗೆ, ತೋಟಗಳಿಗೆ, ಕೊಟ್ಟಿಗೆಗಳಿಗೆ, ಗದ್ದೆಗಳಿಗೆ, ಅಂಗಡಿಗಳಿಗೆ, ಹೋಟೆಲ್‌ಗಳಿಗೆ, ಮಾರ್ಕೆಟ್, ಬ್ಯಾಂಕ್ ಹಾಗೂ ಗ್ರಂಥಾಲಯಗಳಿಗೆ ಒಯ್ದಿತ್ತು. ಹೀಗೆ ಅವರು ಭೇಟಿ ನೀಡಿದ ಕೆಲವು ಸ್ಥಳಗಳು ಮುಂದಿನ ದಾರಿಯನ್ನರಿಯಲು, ಮುಂದಿನ ಸುಳಿವು ದೊರಕಲು ಸಹಾಯಕವಾದರೆ ಮತ್ತು ಕೆಲವು ಅಂಥ ಉಪಯೋಗಕ್ಕೆ ಬರಲಿಲ್ಲ. ಏನೇ ಆದರೂ ಎಲ್ಲರೂ ಸಂತೋಷ ಪೂರಿತವಾಗಿದ್ದರು. ಆಟವನ್ನು ಸ್ಪರ್ಧಾ ಉತ್ಸಾಹದಿಂದ ಆಡಿದ ಅವರೆಲ್ಲರೂ ಆಟವನ್ನು ಆನಂದಿಸಿದ್ದರು. ಕೊನೆಗೂ ನಿಧಿಯನ್ನು ಹುಡುಕಲು ಸಾಧ್ಯವಾಗದ ಮಾತು ಬಿಟ್ಟರೆ ಅವರ್‍ಯಾರಿಗೂ ಆಟವು ನಿರಾಶೆಯನ್ನು ತಂದಿರಲಿಲ್ಲ. ಆಟದ ಕೊನೆಯಾದ ನಿಧಿಯು ಎಲ್ಲಿದೆ ಎಂಬುದನ್ನು ಊಹಿಸಿ ಅವರು ಸುಸ್ತಾದರು.

ಹೀಗೆ ಮಾತು ನಡೆಯುತ್ತಿದ್ದ ಸಮಯದಲ್ಲಿ ಕೊನೆಯ ಸ್ಪರ್ಧಿ ಆಗಮಿಸಿದ. ಅವನೂ ಸಹ ಇತರರಂತೆ ಎಲ್ಲ ಸುಳಿವುಗಳನ್ನೂ ಅರ್ಥಮಾಡಿಕೊಂಡು ಬಹುದೂರ ಕ್ರಮಿಸಿ ಬಂದಿದ್ದನು. ಆದರೆ ನಿಧಿ ಮಾತ್ರ ಅವನಿಗೆ ದೊರಕಿರಲಿಲ್ಲ. ಎಲ್ಲರಿಗಿಂತ ಕೊನೆಗೆ ಬಂದವನಾದ್ದರಿಂದ, ನಿಧಿ ಈಗಾಗಲೇ ದೊರಕಿ ಹೋಗಿದೆ ಎಂದುಕೊಂಡೇ ಅವನು ಬಂದಿದ್ದ. ಅದು ದೊರಕಿಲ್ಲ ಎಂದು ಎಲ್ಲರೂ ಹೇಳಿದಾಗ ತಾವು ಶುರುಮಾಡಿದ ಸ್ಥಳದಲ್ಲೇ ಅದು ಇರಬಹುದೇನೋ ಎಂದು ಹೇಳಿದ. ಮೊದಮೊದಲಿಗೆ ಇದನ್ನು ತಮಾಷೆಯೆಂದು ತಿಳಿದರೂ ನಂತರ ಅವನ ಮಾತನ್ನು ಗಂಭೀರವಾಗಿ ತೆಗೆದುಕೊಂಡು ಅವರೆಲ್ಲ ಅದೇ ಮೇಜಿನ ಬಳಿಗೆ ಧಾವಿಸಿದರು.



ಗಮ್ಯದ ಹತ್ತಿರ ಬಂದ ಸಂತಸದಲ್ಲಿ ಎಲ್ಲರ ನರಗಳೂ ವೀಣೆಯ ತಂತಿಗಳಂತೆ ಮಿಡಿಯುತ್ತಿದ್ದವು. ಉತ್ಸಾಹದ ಅಮಲಿನಲ್ಲಿ ದೇಹದ ರಕ್ತವೆಲ್ಲ ಮೇಲೇರಿ ಮುಖ ಕೆಂಪಾಗಿತ್ತು. ಬೆಳಿಗ್ಗೆ ತಮ್ಮ ಮೊದಲ ಸುಳಿವು ಕೊಟ್ಟ ಟ್ರೇಯನ್ನು ನಿಧಾನಕ್ಕೆ ಎತ್ತಿ ನೋಡಿದರು. ಈಗ ಎಲ್ಲರೂ ಮುಖದಲ್ಲೂ ನಿರಾಶೆ ಎದ್ದು ಕಾಣುತ್ತಿತ್ತು. ಏಕೆಂದರೆ ತಟ್ಟೆ ಕೆಳಗೆ ಏನೂ ಇರಲಿಲ್ಲ. ಇದರ ಮಧ್ಯೆ ಹುಡುಗನೊಬ್ಬ ಸಂತಸದಲ್ಲಿ ಕಿಟಾರೆಂದ. ಯಾರಿಗೂ ಕಾಣದ್ದು ಅವನಿಗೆ ಕಂಡಿತ್ತು. ತಟ್ಟೆಯ ಕೆಳಗೆ ಸಣ್ಣ ಅಕ್ಷರದಲ್ಲಿ ಬರೆದಿತ್ತು; ನಿಧಿ.

**ಕಿರಿಕಿರಿ**

ಕಾರೊಂದು ಶುದ್ಧ ಇಂಧನವನ್ನು ಹೊಂದಿದ್ದರೂ ಕಾರ್ಬೋರೇಟರ್ ಸರಿಯಿಲ್ಲದಿದ್ದರೆ ಕಿರಿಕಿರಿ ಕೊಡುತ್ತದೆ. ಮನುಷ್ಯನೂ ಹಾಗೇ, ಅವನ ಆತ್ಮ ಶುದ್ಧಿಯಿದ್ದರೂ ಮನಸು ಶುದ್ಧಿಯಿಲ್ಲದಿದ್ದರೆ ಕಿರಿಕಿರಿ ಎನಿಸಿಬಿಡುತ್ತಾನೆ.

**ಅಸಂತೋಷ**

ದುಃಖಕ್ಕೀಡುಮಾಡುವ ಹಲವು ಕಾರಣಗಳಲ್ಲಿ ಸ್ಪಷ್ಟವಾದುದೆಂದರೆ, ಸುಳ್ಳು ಭರವಸೆಯನ್ನು ಹೊಂದುವುದು ಅಥವಾ ಬೇರೊಬ್ಬರಿಗೆ ಫಲ ನೀಡುವುದು. ಫಲ ಕೊಡದ ಇಂಥ ಭರವಸೆಗಳಿಂದ ದುಃಖ ಕಟ್ಟಿಟ್ಟ ಬುತ್ತಿ.

**ಮಾಗದ ಹಣ್ಣು**

ಕಾನೂನೊಂದನ್ನು ತರಲು ಅದರೊಂದಿಗೆ ಕಾಲವು ಹೊಂದಿಕೊಳ್ಳಬೇಕು. ಇಲ್ಲದಿದ್ದರೆ ಮಾಗದ ಹಣ್ಣನ್ನು ಕಿತ್ತು ತಂದಂತಾಗುತ್ತದೆ. ಹಣ್ಣಿನ ರೂಪವೇ ಇದ್ದರೂ ತಿನ್ನಲು ಆಗುವುದಿಲ್ಲ.

**ಕಾಣದ್ದು**

ಅ. ಕಾಣದ್ದರಿಂದ ಕಾಣದ್ದು ಯಾವುದೂ ಇಲ್ಲ.

ಆ. ಪ್ರಪಂಚವನ್ನು ಚಿತ್ರಮಂದಿರವೊಂದಕ್ಕೆ ಹೋಲಿಸಬಹುದು. ಏಕೆಂದರೆ ಅಲ್ಲೂ ಇಲ್ಲಿಯಂತೆ ಎಲ್ಲವೂ ಕಾಣುತ್ತದೆ. ಎಲ್ಲದರ ಮೂಲವಾದ ಪ್ರೊಜೆಕ್ಟರ್‌ನಿಂದ ರೀಲು ಬಿಡುವವನ ಹೊರತು.

**ನೇರ ಸ್ವಭಾವ**

ಜೇಡರ ಬಲೆ, ಧೂಳು ಹಾಗೂ ಹುಳು-ಹುಪ್ಪಡಿಗಳು ಕೋಣೆಯ ಮೂಲೆಯಲ್ಲಿ ಕಾಣಸಿಗುತ್ತವೆಯೋ ಹೊರತು ನೇರ ಗೋಡೆಗಳ ಮೇಲಲ್ಲ.

**ವಿಜಯ**

ಜಯವು ಸಾಮಾನ್ಯವಾಗಿ ಎಂಥವನನ್ನೂ ಮೇಲಕ್ಕೇರಿಸುತ್ತದೆ. ಆದರೆ ಜಯದಿಂದ ಜಂಬ ಪಡುವುದು ಸರಿಯಲ್ಲ. ಕಾರಣ, ಮಗು ಹುಟ್ಟಿದ ತಕ್ಷಣ ನಾವೆಲ್ಲ ಸಂತಸ ಪಡುವುದು ನಿಜ. ಆದರೆ ಆ ಮಗುವಿನ ಭವಿಷ್ಯ ಏನು ಎಂದು ಯಾರಿಗೂ ಗೊತ್ತಿರುವುದಿಲ್ಲ.

**ದೂರದೃಷ್ಟಿ**

ಇಲ್ಲಿ ಎಲ್ಲವೂ ಕಗ್ಗತ್ತಲೆ. ಆದರೆ ಟಾರ್ಚೊಂದು ಬಳಿ ಇರುವುದಕ್ಕೆ ನಾನು ಸಂತೋಷವಾಗಿದ್ದೇನೆ. ಆದರೂ ನನಗೆ ಬೇರೇನನ್ನೂ ಗ್ರಹಿಸಲು ಸಾಧ್ಯವಾಗುತ್ತಿಲ್ಲ. ಟಾರ್ಚ್ ಬೆಳಕಿನ ಸಹಾಯವಿಲ್ಲದೇ ಕತ್ತಲೆಯನ್ನು ಬರಿ ಕಣ್ಣುಗಳಲ್ಲೇ ಭೇದಿಸಿ ನೋಡುವ ಮಹದಾಸೆ ನನಗೆ. ಏನು ಮಾಡಬೇಕು? ಈ ಸಮಸ್ಯೆಯ ಪರಿಹಾರಕ್ಕೆ ಒದ್ದಾಡುತ್ತೇನೆ. ಕೊನೆಗೆ ನನಗನಿಸುತ್ತದೆ: ದಿನದ ಬೆಳಕಿಗೆ ಹೊಂದಿಕೊಂಡಂತೆ ರಾತ್ರಿ ಕತ್ತಲೆಗೆ ನನ್ನ ಕಣ್ಣನ್ನು ಹೊಂದಿಸಿಕೊಂಡರೆ ನನ್ನ ಆಸೆ ನೆರವೇರಬಹುದು. ಅತಿಕಷ್ಟ ಪಟ್ಟಮೇಲೆ ನಾನು ಗೆದ್ದೆ. ಈಗ ಕತ್ತಲಲ್ಲಿ ನಾನು ಕುರುಡನಲ್ಲ ಮತ್ತು ಇನ್ನು ಮುಂದೆ ನನಗೆ ಟಾರ್ಚಿನ ಕೃತಕ ಬೆಳಕಿನ ಸಹಾಯ ಬೇಕಿಲ್ಲ. ಅದಿದ್ದರೂ ಸಹ ಹೆಚ್ಚು ದೂರ ಅದರ ಬೆಳಕು ಹೋಗುತ್ತಿರಲಿಲ್ಲ. ನನ್ನ ಭೌತಿಕ ದೃಷ್ಟಿಯಿಂದ ಪ್ರಪಂಚದೊಂದಿಗೆ ಬೆರೆತು ಹೋಗಿದ್ದೇನೆ. ಹಗಲು–ರಾತ್ರಿಗಳಲ್ಲಿ ನನಗೆ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಸಮಯದಲ್ಲೂ ಸಹ. ಈಗ ನಾನು ಆಧ್ಯಾತ್ಮಿಕ ದೃಷ್ಟಿಯನ್ನು ಜಾಗೃತಿ ಮಾಡಿಕೊಂಡು ಈ ಭೂಮಿಯ ಮೇಲಿರುವ ಇತರರನ್ನು ನನ್ನ ಗೆಳೆಯರಂತೆ ನೋಡಲು ಸಾಧ್ಯವಿಲ್ಲವೇ? ಸಾಧ್ಯ ಎನಿಸುತ್ತಿದೆ. ಅದನ್ನು ಸಾಧಿಸಲು ಮನುಷ್ಯ ನಿರ್ಮಿಸಿದ ಗುಡಿಯನ್ನು ತೊರೆದು ಹಾಗೂ ಅಂತಹ ಕಡಿಮೆ ಶಕ್ತಿಯ ಬೆಳಕು ತೋರುವ ಟಾರ್ಚ್‌ಗಳನ್ನು ಮೀರಿ ನನ್ನ ದೃಷ್ಟಿಯನ್ನು ಹಿಗ್ಗಿಸಿಕೊಳ್ಳಬೇಕು. ಇಡಿಯ ಪ್ರಪಂಚವೇ ನನ್ನ ದೇಗುಲವಾದರೆ ಅದು ಸಾಧ್ಯ.

**ಪ್ರಮಾಣ**

ನಾವು ಯಾವುದಕ್ಕೆ ಅರ್ಹರೋ ಅದನ್ನು ಪಡೆದೇ ತೀರುತ್ತೇವೆ ಎಂಬ ನಮ್ಮ ನಂಬಿಕೆ ಬಲವಾಗಿದ್ದಲ್ಲಿ ಪ್ರಮಾಣ ಪಡೆಯುವುದು ಅವಶ್ಯಕವಾಗಿರುವುದಿಲ್ಲ.

**ಯುದ್ಧ**

ಯುದ್ಧ ಸಾರುವವರು, ಯುದ್ಧಕ್ಕೆ ಕಾಲ್ಕೆರೆಯುವವರು ತಾವೂ ಸೋಲಬಹುದು ಎಂಬುದನ್ನು ಮನಗಂಡರೆ ಪ್ರಪಂಚದಲ್ಲಿ ಯಾವುದೇ ಯುದ್ಧ ನಡೆಯುತ್ತಿರಲಿಲ್ಲ.



**ಅಲೆಗಳು**

ಅಲೆಗಳು ಮೇಲ್ಮೈಯಲ್ಲಷ್ಟೆ; ಕೆಳಗೆಲ್ಲ ಶಾಂತವಾಗಿರುತ್ತದೆ.

**ಸಂಪತ್ತು**

ಸಂಪತ್ತಿನ ಬೆಲೆ ಅದನ್ನು ಉಳಿಸುವುದರಲ್ಲಿಲ್ಲ, ಬದಲಾಗಿ ಅದನ್ನು ವಿವೇಕಯುತವಾಗಿ ಬಳಸುವುದರಲ್ಲಿದೆ. ಅಣೆಕಟ್ಟು ಕಟ್ಟಿದ ಮೇಲೆ ಬರುವ ನೀರನ್ನೆಲ್ಲ ತಡೆದು ನಿಲ್ಲಿಸಿದರೆ ಪ್ರಯೋಜನವಿಲ್ಲ. ಆ ನೀರನ್ನು ಸದುಪಯೋಗಕ್ಕಾಗಿ ಹಂಚಿದರೆ ಮಾತ್ರ ಅಣೆಕಟ್ಟಿಗೆ ಬೆಲೆ.

**ಏಕೆ**

ಪರರ ವಿಷಯದಲ್ಲಿ, ಅವರ ಕುರಿತಾದ ವಿಷಯಗಳಲ್ಲಿ ನಾವು ಹೆಚ್ಚು ಬಳಸುವ 'ಏಕೆ' ಪ್ರಶ್ನಾರ್ಥಕವನ್ನು ನಮ್ಮದೇ ವಿಷಯದಲ್ಲಿ ಕೇಳಿಕೊಂಡಾಗ ಕಲಿಯಬೇಕಾದ ಎಲ್ಲವನ್ನು ಕಲಿಯುತ್ತೇವೆ.

**ಕೆಲಸ**

ಹೆಚ್ಚು ಕೆಲಸ ಮಾಡಿದಷ್ಟೂ ನಮ್ಮ ಬಗ್ಗೆ ಯೋಚಿಸುವುದು ಕಡಿಮೆಯಾಗುತ್ತದೆ. ಸ್ವಾರ್ಥ ಚಿಂತನೆ ಕಡಿಮೆಯಿದ್ದಷ್ಟೂ ನಾವು ಸುಖವಾಗಿರುತ್ತೇವೆ.

**ಬರವಣಿಗೆ**

ನಮ್ಮ ಹಸ್ತಾಕ್ಷರ ನಮ್ಮಂತೆಯೇ; ನೋಡುವುದಕ್ಕೆ ಸುಂದರ, ಅರ್ಥ ಮಾಡಿಕೊಳ್ಳುವುದಕ್ಕೆ ಕಷ್ಟ ಹಾಗೂ ಕೆಲವು ಸಲ ಅಸಾಧ್ಯ.

**ಸೊನ್ನೆ**

ಹೇಗೆ ಎಲ್ಲವೂ ಸರ್ವಶಕ್ತನಿಂದ ಉದಯಿಸುತ್ತದೋ ಹಾಗೆ ಸೊನ್ನೆಯಿಂದ ಎಲ್ಲ ತರ್ಕ, ಬೆಲೆಗಳೂ ಹುಟ್ಟುತ್ತವೆ– ನಮ್ಮ ಯೋಚನೆಗಳು ಇದಕ್ಕೆ ಹೊರತಲ್ಲ. ಸೊನ್ನೆ ಎಂಬ ಚಿಹ್ನೆ ಎಷ್ಟು ಅನಗತ್ಯವೋ ಅಷ್ಟೇ ಅಗತ್ಯ ಕೂಡ.

* * * *